Language and Literacy

# Early literacy

# ಪ್ರಾರಂಭಿಕ ಓದುವಿಕೆ





Teacher Education through School-based Support in India
www.TESS-India.edu.in

The Open University

UKaid from the British people

http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾOERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು 'ವಿದ್ಯಾರ್ಥಿ' ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ - ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL04TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ಈ ಘಟಕದಲ್ಲಿ ಪ್ರಾರಂಭಿಕ ಓದುವಿಕೆಯನ್ನು ಕಲಿಸುವ, ಬೆಂಬಲಿಸುವ, ಅದಕ್ಕಾಗಿ ತರಗತಿ ಯೋಜಿಸಿ, ಮೌಲ್ಯಾಂಕನ ಮಾಡುವ ರೀತಿಗಳನ್ನು ತಿಳಿಯುವಿರಿ. ಪ್ರಾಯಶಃ, 'ಓದುವಿಕೆ' ನಿಮ್ಮ ವಿದ್ಯಾರ್ಥಿಗಳು ಗಳಿಸುವ ಅತ್ಯಂತ ಮಹತ್ವದ ಮತ್ತು ಅವರನ್ನು ಸಾಕಷ್ಟು ಸಶಕ್ತರಾನ್ನಾಗಿಸುವ ಕೌಶಲ. ಈ ಕೌಶಲ ಗಳಿಕೆಗೆ ದೊರಕುವ ಬೆಂಬಲ ಮತ್ತು ಪ್ರೋತ್ಸಾಹದಲ್ಲಿ ನಿಮ್ಮ ಪಾತ್ರ ಬಹಳ ಮಹತ್ವಪೂರ್ಣವಾದದ್ದು. ಭವಿಷ್ಯದಲ್ಲಿ, ಅವರ ಶೈಕ್ಷಣಿಕ ಜೀವನದ ಹಾಗೂ ಒಟ್ಟಾರೆ ಜೀವನದ ಯಶಸ್ಸಿಗೆ ಈ ಪ್ರೋತ್ಸಾಹ ನಾಂದಿಯಾಗುತ್ತದೆ.

ಓದಿನ ಕಲಿಕೆ ಹುಟ್ಟಿನಿಂದಲೇ ಬರುವ ಸಹಜ-ಸ್ವಭಾವ ಸಿದ್ಧವಾದ ಪ್ರಕ್ರಿಯೆಯಲ್ಲ. ಓದು, ನಿರ್ದಿಷ್ಟ ಅವಧಿಯಲ್ಲಿ ಕ್ರಮಬದ್ಧ ಆಭ್ಯಾಸವನ್ನು ಬೇಡುತ್ತದೆ. ಈ ಅಭ್ಯಾಸ ಅನೌಪಚಾರಿಕವಾಗಿ (ಮನೆಯಲ್ಲಿ ಅಥವಾ ಸಮುದಾಯದಲ್ಲಿ) ಮತ್ತು ಔಪಚಾರಿಕವಾಗಿ (ಶಾಲೆಯಲ್ಲಿ) ಆಗಬೇಕು. ಓದಿನ ಅಭ್ಯಾಸಕ್ಕೆ ಹತ್ತು ಹಲವು ದಾರಿಗಳಿವೆ, ಅವುಗಳಲ್ಲಿ ಕೆಲವನ್ನು ನೀವೂ ಕ್ರಮಿಸಿರುತ್ತೀರಿ.

ನೀವು ಶಿಕ್ಷಕರಾಗಿರುವುದೇ, ಮಾಹಿತಿಗಾಗಿ ಮತ್ತು ಮನೋರಂಜನೆ ಯಾವುದಕ್ಕೆ ಬೇಕಾದರೂ ವಿವಿಧ ಪಠ್ಯಗಳನ್ನು ಸರಾಗವಾಗಿ ಓದುತ್ತೀರಿ ಎನ್ನುವುದನ್ನು ಸೂಚಿಸುತ್ತದೆ. ಮುದ್ರಿತ ಪಠ್ಯವಷ್ಟನ್ನಲ್ಲದೇ, ನೀವು ಕಂಪ್ಯೂಟರ್ ಮತ್ತು ಮೋಬೈಲ್ ನಲ್ಲಿ ಕೂಡ ಓದುತ್ತಿರುತ್ತೀರಿ. ಈ ಸಂಕೀರ್ಣ ಕೌಶಲವನ್ನು ನೀವು ಗಳಿಸಿಕೊಂಡಿದ್ದಾದರೂ ಹೇಗೆ? ಈ ಘಟಕದಲ್ಲಿ ನೀವು ಓದುಗರಾಗಲು ಕ್ರಮಿಸಿದ ದಾರಿ ಮತ್ತು ನಿಮ್ಮ ವಿದ್ಯಾರ್ಥಿಗಳ ಓದಿನ ಹಾದಿ ಸುಗಮವಾಗಿಸಲು ನೀಡಬಹುದಾದ ಬೆಂಬಲದ ಬಗ್ಗೆ ಚಿಂತನೆ ನಡೆಸುವಿರಿ.

## ಈ ಘಟಕದಲ್ಲಿ ನೀವೇನು ಕಲಿಯುವಿರಿ?

- ಮಕ್ಕಳನ್ನು ಪ್ರಾರಂಭಿಕ ಓದಿನ ಪಾಠಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಅವು ಸಂತೋಷದಾಯಕವಾಗಿರುವಂತೆ ಮಾಡಲು ಪಾಠಗಳನ್ನು ಯೋಜಿಸುವ ರೀತಿ
- ಓದನ್ನು ಕಲಿಯುವಾಗ, ಆರಂಭಿಕ ಹಂತಗಳಲ್ಲಿ ಮಕ್ಕಳು ತೋರ್ಪಡಿಸುವ ವರ್ತನೆಗಳನ್ನು ಗುರುತಿಸುವ ರೀತಿ
- ಪ್ರಾರಂಭಿಕ ಓದಿನ ಬೆಳವಣಿಗೆಯ ಮೌಲ್ಯಾಂಕನ ಮತ್ತು ಅದನ್ನು ಬೆಂಬಲಿಸುವ ಮಾರ್ಗಗಳು

## ಈ ಮಾರ್ಗವೇಕೆ ಮುಖ್ಯ?

ಆರಂಭಿಕ ಓದುವಿಕೆಗೆ ಹಚ್ಚುವ ಪ್ರಕ್ರಿಯೆ ಮಕ್ಕಳು ಅಕ್ಷರ ಮತ್ತು ಪದ ಗುರುತಿಸುವುದನ್ನು ಕಲಿಸುವುದಕ್ಕಿಂತ ಹೆಚ್ಚಿನದನ್ನು ಒಳಗೊಂಡಿದೆ. ಪಠ್ಯದ ಅರ್ಥ ಗ್ರಹಿಕೆ ಸಂಪೂರ್ಣವಾಗಿ ಆಗುವುದಕ್ಕೆ ಸಹಾಯ ಮಾಡುವುದರಿಂದ ಮಾತ್ರ ಮಕ್ಕಳನ್ನು ಓದಿಗೆ ಹಚ್ಚಬಹುದು. ಓದಿನ ಗ್ರಹಿಕೆ ಅವರ ಭಾಷಾ ಜ್ಞಾನ ಮತ್ತು ಪ್ರಪಂಚದ ಬಗ್ಗೆ ಅವರಿಗೆ ಇರುವ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಓದುವುದರಲ್ಲಿ ಕುಶಲತೆ ಇದ್ದು, ಸರಾಗವಾಗಿ ಓದುವ ಹಾಗೂ ಓದುವುದನ್ನು ಆನಂದಿಸುವ ಮಕ್ಕಳು ಶಾಲೆಯ ಇತರ ಕ್ಷೇತ್ರಗಳಲ್ಲಿಯೂ ಯಶಸ್ವಿಯಾಗುವ ಸಂಭವ ಹೆಚ್ಚಿರುತ್ತದೆ.

ನಿಮ್ಮ ಎಲ್ಲ ವಿದ್ಯಾರ್ಥಿಗಳೂ ಓದಿನಲ್ಲಿ ತೊಡಗಿಕೊಂಡು, ಅದರಲ್ಲಿ ಮುಂದುವರಿಯುವುದನ್ನು ಖಚಿತವಾಗಿಸಲು ಈ ಕೆಳಗಿನದನ್ನು ಮಾಡುವುದು ಬಹಳ ಮುಖ್ಯ:

- ಅವರನ್ನು ಪ್ರೇರಿಪಿಸಿ, ಪ್ರೋತ್ಸಾಹಿಸುವುದು
- ಗಮನಿಸಿ ಮೌಲ್ಯಾಂಕನ ಮಾಡುವುದು
- ವಿದ್ಯಾರ್ಥಿಗಳನ್ನು ಪರಿವೀಕ್ಷಿಸುವುದರಿಂದ ಸಿಗುವ ಮಾಹಿತಿ ಬಳಸಿಕೊಂಡು, ಅವರು ಈ ಅತ್ಯಗತ್ಯ ಕೌಶಲ ಗಳಿಸಲು ಆವಶ್ಯವಾದ ಬೋಧನೆ ಮತ್ತು ಬೆಂಬಲ ನೀಡುವುದಕ್ಕೆ ತಕ್ಕುದಾದ ಪಾಠಗಳನ್ನು ಯೋಜಿಸುವುದು.

# 1 ಓದಿನ ಪ್ರಾರಂಭ- 'ಯಾರು'?, 'ಏನು'? 'ಎಲ್ಲಿ'?, 'ಏಕೆ'?

- ನಿಮ್ಮ ಪ್ರಾರಂಭಿಕ ಓದಿನ ಅನುಭವಗಳಲ್ಲಿ ನಿಮಗೇನು ನೆನಪಿದೆ? ಕೆಳಗಿನ ಪ್ರಸಂಗ ಅಧ್ಯಯನಕ್ಕೂ ಅದಕ್ಕೂ ಯಾವ ರೀತಿಯ ಹೋಲಿಕೆಗಳಿವೆ?

## ಪ್ರಸಂಗ ಅಧ್ಯಯನ 1: ಓದಿನ ಕಲಿಕೆಯ ನೆನಪುಗಳು

*ಕೆಳಗೆ ಏಳು ಭಾರತೀಯ ಶಿಕ್ಷಕರು ತಮ್ಮ ಓದಿನ ಆರಂಭಿಕ ಅನುಭವಗಳನ್ನು ನೆನಪಿಸಿಕೊಂಡಿರುವುದರ ಆಯ್ದುಭಾಗಗಳನ್ನು ಕೊಡಲಾಗಿದೆ. ಅವರ ನೆನಪುಗಳನ್ನು ಓದುತ್ತಿರುವಾಗ, ಅವರಿಗೆ ಓದಲು ಸಹಾಯ ಮಾಡಿದವರು* ***ಯಾರು,*** *ಅವರು ಓದಿದ್ದು* ***ಏನು, ಎಲ್ಲಿ*** *ಓದಿದರು ಮತ್ತು* ***ಏಕೆ*** *ಓದಿದರು ಎನ್ನುವ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಿ.*

a. ನನ್ನ ತಾಯಿ ನನಗೆ ಮತ್ತು ನನ್ನ ಅಕ್ಕ ತಂಗಿಯರಿಗೆ ಅನೇಕ ವಿಸ್ಮಯಕಾರೀ ಸಾಂಪ್ರದಾಯಿಕ ಕಥೆಗಳನ್ನು ಹೇಳ ತ್ತಿದ್ದರು. ಕೆಲವು ಸಲ ಅವುಗಳನ್ನು ಬರೆಯುತ್ತಿದ್ದರು ಮತ್ತು ಚಿತ್ರಿಸುತ್ತಿದ್ದರು. ಕಾಗದವನ್ನು ಪುನರ್ಬಳಕೆ ಮಾಡಿ ಮತ್ತು ನಿಯತಕಾಲಿಕಗಳಿಂದ ಕತ್ತರಿಸಿದ ಭಾಗಗಳನ್ನು (cut-out) ಬಳಸಿ ನಮ್ಮದೇ ಸ್ವಂತ ಸಚಿತ್ರ ಪುಸ್ತಿಕೆಗಳನ್ನು ರಚಿಸಲು ಪ್ರೋತ್ಸಾಹಿಸುತ್ತಿದ್ದರು. ನಾವೆಲ್ಲ ಒಟ್ಟು ಸೇರಿ ಮಾಡಿದ ಪುಸ್ತಕ -ಮಾಲಿಕೆ ನಮ್ಮ ಬಳಿ ಇತ್ತು.

b. ನನ್ನ ತಾತ ಬಹಳ ಶಿಸ್ತಿನ ಮನುಷ್ಯರು. ನಮ್ಮ ಮನೆಯಲ್ಲಿ ಇದ್ದ ಒಂದೇ ಪುಸ್ತಕವೆಂದರೆ, ಒಂದು ನಿಘಂಟು. ನಾನು ಚಿಕ್ಕವಳಿದ್ದಾಗ ಈ ನಿಘಂಟಿನಿಂದ ದಿನಕ್ಕೆ ಐದು ಪದಗಳನ್ನು ಗಟ್ಟು ಹೊಡಿಯಬೇಕಿತ್ತು. ಒಮ್ಮೆ ಅವರು ನನಗೆ ದುಡ್ಡು ಕೊಡಲಿಲ್ಲ ಅಂತ ಅವರಿಗೆ 'ನೀನೊಬ್ಬ ಕೃಪಣ!' ಎಂದು ಹೇಳಿದೆ. ಕೇಳಿದ ತಕ್ಷಣ ಅವರಿಗೆ ಸಿಟ್ಟೇನೋ ಬಂತು, ಆದರೆ ಬೇಗನೇ ನಕ್ಕರು. ನನ್ನ ಪದ ಸಂಪತ್ತು ವಿಶಾಲವಾಗಿದೆ, ಆದರೆ ನಾನು ಕಥೆ ಪುಸ್ತಕಗಳನ್ನು ಓದಲಿಲ್ಲ.

c. ನಾವು ಚಿಕ್ಕವರಿದ್ದಾಗ, ನನ್ನ ತಂದೆ ಪ್ರತೀ ಸಂಜೆ ವೇದದಿಂದ ಒಂದು ಶ್ಲೋಕ ಓದುತ್ತಿದ್ದರು. ನಾವು ಅದನ್ನು ವಿವರಿಸಬೇಕಿತ್ತು. ಈ ಶ್ಲೋಕಗಳ ಸಂಕೀರ್ಣವಾಗಿದ್ದವು ಮತ್ತು ಅರ್ಥ ಮಾಡಿಕೊಳ್ಳಲು ಕಷ್ಟ ಪಡಬೇಕಾಗಿತ್ತು. ಒಂದು ದಿನ ನನ್ನಕ್ಕ, ಮುಂದಿನ ಶ್ಲೋಕವನ್ನು ಗುಟ್ಟಾಗಿ ಓದಿ, ಅದರ ಅರ್ಥವನ್ನು ಸ್ಪಷ್ಟವಾಗಿ ನನಗೆ ತಿಳಿಯುವಂತೆ ವಿವರಿಸಿದ್ದಳು. ಅಂದು ಸಾಯಂಕಾಲ ನನ್ನ ತಂದೆಗೆ ನನ್ನಿಂದ ಬಹಳ ಸಂತೋಷವಾಗಿದ್ದು ಇಂದೂ ನೆನಪಿದೆ!

d. ನನ್ನ ಅಜ್ಜಿ ಕೋಲಿನಿಂದ ನೆಲದ ಮೇಲೆ ಪದಗಳನ್ನು ಬರೆದು ಅರ್ಥ ವಿವರಿಸುತ್ತಿದ್ದರು. ಇವೇ ನಾನು ಓದಲು ಕಲಿತ ಮೊದಲ ಪದಗಳು. ನಂತರ ನನ್ನ ಅಕ್ಕ ಅವಳ ಪಠ್ಯ ಪುಸ್ತಕ ಓದಲು ಕಲಿಸಿದಳು. ಅವಳು ಕಲಿಸಿದ ಉದ್ದೇಶವೇನೆಂದರೆ, ನಾನು ವಯಸ್ಸಿಗೆ ಮೀರಿ ಉದ್ದವಾಗಿದ್ದೆ. ಅದಕ್ಕೆ ಸ್ವಲ್ಪ ವಯಸ್ಸೂ ಹೆಚ್ಚೇ ಕಾಣಿಸುತ್ತಿತ್ತು. ನಾನು ಶಾಲೆಗೆ ಹೋದರೆ ಇಷ್ಟು ದೊಡ್ಡೋಳು ಇನ್ನೂ ಓದಕ್ಕೆ ಬರಲ್ಲ ಅಂತ ರೇಗಿಸ್ತಾರೆ ಅಂತ ಹೆದರಿಕೊಂಡು ನನಗೆ ಓದಲು ಕಲಿಸಿದ್ಲು.

e. ನನ್ನ ಮನೆಯಲ್ಲಿ ಮತ್ತೆ ಹಳ್ಳಿಯಲ್ಲಿ ಓದುವ ಸಾಮಗ್ರಿಗಳಿರಲಿಲ್ಲ. ನಾನು ಪದಗಳನ್ನು ಬರವಣಿಗೆಯಲ್ಲಿ ಕಂಡಿದ್ದೇ ಶಾಲೆಯಲ್ಲಿ. ನನ್ನ ಶಿಕ್ಷಕರೇ ನನಗೆ ಸ್ಫೂರ್ತಿ. ನಮ್ಮನ್ನು ನೆಲದ ಮೇಲೆ ಕೂರಿಸಿ, ಬೇಕಾದಷ್ಟು ಒಳ್ಳೊಳ್ಳೆ ಕಥೆಗಳನ್ನು ಹೇಳ್ತಿದ್ದರು. ಆ ಕಥೆಗಳ ಈವತ್ತಿಗೂ ಜ್ಞಾಪಕ ಇದೆ. ನಂತರ ಇದೇ ಕಥೆಗಳನ್ನು ಚಾರ್ಟ್ ಪೇಪರ್ ಮೇಲೆ ದೊಡ್ಡ ದೊಡ್ಡ ಅಕ್ಷರದಲ್ಲಿ ಬರೆಯುತ್ತಿದ್ದರು. ನಮಗೆಲ್ಲರಿಗೂ ಸುಲಭವಾಗಿ ಪದಗಳ ಕಾಣಿಸುತ್ತಿದ್ದವು. ನನಗೆ ಕಥೆ ಆಗಲೇ ಬಾಯಿಗೆ ಬರ್ತಾ ಇದ್ದಿದ್ದರಿಂದ, ನನ್ನ ಮನಸ್ಸಿನಲ್ಲಿ ನಾನು ಸುಲಭವಾಗಿ ಓದ್ತಿದ್ದೀನಿ ಅನ್ನೋ ಭಾವನೆ ಬರ್ತಿತ್ತು.

f. ನನ್ನ ಶಾಲಾ ಶಿಕ್ಷಕರು ನನಗೆ ಪದ್ಯ ಬಾಯಿಪಾಠ ಮಾಡುವುದು ಹೇಳಿಕೊಟ್ಟಿದ್ದರು. ಸಮಯ ಕಳೆದ್ಹಂಗೆಲ್ಲಾ ಇವು ಉದ್ದ ಆಗ್ತಾ ಹೋದ್ವು. ಉದ್ದ ಪದ್ಯ ನೆನಪಿಟ್ಟುಕೊಳ್ಳೋದಕ್ಕೆ ಖುಷಿಯಾಗ್ತಿತ್ತು!! ಮನೇಗೆ ಬಂದು ತಂದೆ ತಾಯಿಗೆ ಈ ಪದ್ಯಗಳನ್ನು ಒಪ್ಪಿಸಿ, ಅವರಿಂದ ಮೆಚ್ಚುಗೆ ಪಡೆಯುತ್ತಿದ್ದೆ. ಮನೆಗೆ ಯಾರಾದ್ರೂ ಅತಿಥಿಗಳು ಬಂದಿದ್ರೆ ಅವರ ಮುಂದೆ ಪದ್ಯ ಹೇಳಿಸುತ್ತಿದ್ದರು. ಅಡಿಗರ "ಕಟ್ಟುವೆವು ನಾವು" ಪದ್ಯವನ್ನು ಇಂದಿಗೂ ಹೇಳಬಲ್ಲೆ. ಅದು ಪ್ರಾರಂಭವಾಗುವುದು ಹೀಗೆ: ಕಟ್ಟುವೆವು ನಾವು ಹೊಸ ನಾಡೊಂದನ್ನು, ರಸದ ಬೀಡೊಂದನ್ನು……" ನಾನು ಕವಿತೆಗಳನ್ನು ಪುಸ್ತಕದಿಂದ ಓದಿದ್ದು ಬಹಳ ವರ್ಷಗಳ ನಂತರವೇ.

> ನಾನು ವಯಸ್ಕಳಾಗುವರೆಗೂ ಓದುವುದರಲ್ಲಿ ಖುಷಿ ಕಂಡಿರಲಿಲ್ಲ. ನನ್ನ ಶಿಕ್ಷಕರು ತರಗತಿಯಲ್ಲಿ ಬರೀ ಪಠ್ಯಪುಸ್ತಕವನ್ನೇ ಬಳಸುತ್ತಿದ್ದರು. ನಾವು ಪಾಠ ಓದುತ್ತಿದ್ದೆವು ಮತ್ತು ಅದರ ಹಿಂದಿರುವ ಅಭ್ಯಾಸಗಳನ್ನು ಮಾಡುತ್ತಿದ್ದೆವು. ಪಠ್ಯವು ನೀರಸವಾಗಿರುತ್ತಿತ್ತು ಮತ್ತು ನಮ್ಮ ಆಸಕ್ತಿಗಳಿಗೂ ಇವಕ್ಕೂ ಸಂಬಂಧವಿರುತ್ತಿರಲಿಲ್ಲ. ರಾತ್ರಿ ಮನೆಯಲ್ಲಿ ದೊಡ್ಡವರು ಹೇಳುತ್ತಿದ್ದ ರಾಮಾಯಣದ ಕಥೆಗಳು ಇದಕ್ಕಿಂತ ಎಷ್ಟೋ ಚನ್ನಾಗಿರುತ್ತಿತ್ತು ಮತ್ತು ಅವನ್ನು ಕೇಳಿಸಿಕೊಳ್ಳಲು ರಾತ್ರಿಯೆಲ್ಲಾ ಎದ್ದು ಕೂತಿರುತ್ತಿದ್ದೆ. ದೊಡ್ಡವನಾದ ಮೇಲೆ ಸಿನೆಮಾ ನೋಡಲು ಹೋಗಲಿಕ್ಕೆ ಶುರು ಮಾಡಿದೆ, ಹಾಗೆ ನೋಡಿದರೆ, ಸಿನೆಮಾಗಳೆಲ್ಲವೂ ಕಥೆಗಳೇ

### ಚಿಂತನೆಗೊಂದು ಕ್ಷಣ

ಈ ಭಾಗದ ಟಿಪ್ಪಣಿ ನಿಮಗೇನು ಹೇಳುತ್ತಿವೆ?

ಈ ಭಾಗದ ಟಿಪ್ಪಣಿ ನಿಮಗೇನು ಹೇಳುತ್ತಿವೆ?

- **ಯಾರು?** ಈ ವ್ಯಕ್ತಿಗಳಿಗೆ ಓದು ಕಲಿಸಲು ಮುಖ್ಯ ಪಾತ್ರ ವಹಿಸಿದವರ ಭಿನ್ನತೆ ಕಂಡು ಆಶ್ಚರ್ಯವಾಯಿತೇ? ಒಬ್ಬರು ಓದಲು ಪ್ರೇರೇಪಿಸಿದ ಶಿಕ್ಷಕರನ್ನು ನೆನಸಿಕೊಂಡರೆ ಇನ್ನೊಂದಿಷ್ಟು ಜನ ಮನೆಯವರನ್ನು ನೆನೆಸಿಕೊಂಡರು. ಶಾಲೆಯ ಆಚೆ ಯಾವುದೇ ರೀತಿಯ ಬೆಂಬಲವಿರಲಿ ಬಿಡಲಿ, ಅವರ ಪ್ರಾರಂಭಿಕ ಓದಿನ ಯಶಸ್ಸಿಗೆ ನಿಮ್ಮ ಕೊಡುಗೆ ಅತ್ಯಮೂಲ್ಯವಾದದ್ದು.
- **ಏನು?** ಓದನ್ನು ಕಲಿಸಲಿಕ್ಕೆ ವಿಸ್ತೃತ ಹರವಿರುವ ಮೂಲ ಸಾಮಗ್ರಿಗಳ ಬಳಕೆಯಾಗಬೇಕು ಮತ್ತು ಚಟುವಟಿಕೆಗಳಲ್ಲಿ ವೈವಿಧ್ಯತೆ ಇರಬೇಕು. ಕಥೆ ಕೇಳುವುದು, ಕವನ ವಾಚನ, ಪುಸ್ತಕಗಳ ರಚನೆ ಮತ್ತು ಪದಗಳ ಕಂಠಪಾಠ ಮಾಡುವುದು ಇಲ್ಲಿ ಹೇಳಲಾಗಿರುವ ಕೆಲವು ಮಾರ್ಗಗಳು.
- **ಎಲ್ಲಿ?** ಓದಿನ ಕಲಿಕೆ ಅನೇಕ ರೀತಿಯ ವೈವಿಧ್ಯಮಯ ಸನ್ನಿವೇಶಗಳಲ್ಲಿ ಆಗಬಹುದು. ಮಕ್ಕಳಿಗೆ ಒಂದು ಕಡೆ ಓದಿನ ಕಲಿಕಾ ಪರಿಚಯ ಆಗಿ, ಕಲಿಕೆಯ ಮುಂದುವರಿಕೆ ಮತ್ತೊಂದು ಕಡೆ ಆಗಬಹುದು.
- **ಏಕೆ?** ಕಥೆಹೇಳುವುದರಲ್ಲಿ ಮತ್ತು ಓದಿನಲ್ಲಿ ತಲ್ಲೀನತೆ ಮತ್ತು ಆನಂದವನ್ನು ಕಂಡರೆ, ಮಕ್ಕಳು ಅದನ್ನು ತಕ್ಷಣವೇ ನಕಲು ಮಾಡುವ ಪ್ರಯತ್ನ ಮಾಡುತ್ತಾರೆ.ಮೇಲಿನ ಹೇಳಿಕೆಗಳಿಂದ ತಿಳಿದು ಬರುವುದೇನೆಂದರೆ. ಓದುವಿಕೆ ಅಂತರ್ ಕ್ರಿಯೆಗಳಿಂದ ಜರುಗುವ ಪ್ರಕ್ರಿಯೆ. ಇದರಲ್ಲಿ ವಿಧ ವಿಧವಾದ ಜನರ. ವಿಸ್ತೃತ ಹರವಿರುವ ಸಾಮಗ್ರಿ ಮೂಲಗಳು ಮತ್ತು ಅನುಭವಗಳು ಅಡಕವಾಗಿರುತ್ತವೆ. ಮೇಲೆ ವಿವರಿಸಿದ ಅಭ್ಯಾಸ ಅಥವಾ ಸಂಪನ್ಮೂಲಗಳಲ್ಲಿ ಯಾವುದಾದರೂ ನಿಮ್ಮ ತರಗತಿಯಲ್ಲಿ ಇವೆಯೇ? ಯಾಕೆ ಅಥವಾ ಯಾಕಿಲ್ಲ?

## ಚಟುವಟಿಕೆ 1: ನಿಮ್ಮ ಓದಿನ ಕಲಿಕೆಯ ನೆನಪು

ಈಗ ನೀವು ಓದಲು ಕಲಿತದ್ದರ ನೆನಪಿನ ಮೇಲೆ ಚಿಂತನೆ ನಡೆಸಿ. ಚಿತ್ರ1 ರ ಮಧ್ಯದಲ್ಲಿ ನಿಮ್ಮ ಹೆಸರು ಬರೆಯಿರಿ. ನಂತರ ಕೆಳಗಿನ ಪ್ರಶ್ನೆಗಳಿಗೆ ನಿಮ್ಮ ಉತ್ತರವನ್ನು ಉಳಿದ ನಾಲ್ಕು ಭಾಗಗಳಲ್ಲಿ ಬರೆಯಿರಿ.

- ನಿಮ್ಮನ್ನು ಓದಿಗೆ ಪರಿಚಯಿಸಿದವರು ಯಾರು?
- ನೀವು ಮೊದಲಿಗೆ ಓದಿದ್ದು ಏನನ್ನು?
- ಇದನ್ನು ಮಾಡಿದ್ದು ಎಲ್ಲಿ?
- ಯಾಕೆ ಹೀಗಾಯಿತು?




**ಚಿತ್ರ 1** ನಿಮ್ಮ ಓದಿನ ಕಲಿಕೆಯ ನೆನಪು

ನಿಮ್ಮ ನೆನಪುಗಳನ್ನು ನಿಮ್ಮ ಸಹೋದ್ಯೋಗಿಯೊಂದಿಗೆ ಹಂಚಿಕೊಳ್ಳಿ. ನಿಮ್ಮಿಬ್ಬರ ಓದಿನ ಕಲಿಕಾ ಅನುಭವಗಳಲ್ಲಿ ಸಾಮ್ಯತೆಗಳೇನಿವೆ ಮತ್ತು ವ್ಯತ್ಯಾಸಗಳೇನಿವೆ?

ನಿಮ್ಮ ಪ್ರಾರಂಭಿಕ ಓದಿನ ಅನುಭವಗಳು ನಿಮ್ಮ ತರಗತಿ ಬೋಧನೆಯಲ್ಲಿ ಬಳಕೆಯಾಗಿದೆಯೆ? ಯಾಕೆ ಅಥವಾ ಯಾಕಿಲ್ಲ?

**ಚಿಂತನೆಗೊಂದು ಕ್ಷಣ**

ಈಗ ಈ ಮನೋನಕ್ಷೆಯನ್ನು ನಿಮ್ಮ ವಿದ್ಯಾರ್ಥಿಗಳ ದೃಷ್ಟಿಯಿಂದ ನೋಡಿರಿ. ಈ ನಕ್ಷೆಯ ಕೇಂದ್ರದಲ್ಲಿ ನಿಮ್ಮ ಬದಲು ನೀವು ಬೋಧಿಸುವ ವಿದ್ಯಾರ್ಥಿಗಳ ಕುರಿತು ಚಿಂತಿಸಿ.

- ಶಾಲೆಯ ಆಚೆ ಇರುವ ವ್ಯಕ್ತಿಗಳು ನಿಮ್ಮ ವಿದ್ಯಾರ್ಥಿಗಳನ್ನು ಓದಿಗೆ ಪರಿಚಯಿಸುವುದರಲ್ಲಿ ಭಾಗೀದಾರರಾದರೂ, ಶಿಕ್ಷಕರಾದ ನೀವೇ ಈ ನಕ್ಷೆಯ "ಯಾರು". ನಿಮ್ಮ ವಿದ್ಯಾರ್ಥಿಗಳ ಓದುವಿಕೆಯ ಆದರ್ಶ ವ್ಯಕ್ತಿ ನೀವೇ ಆಗಬೇಕಾಗಿದೆ. ನಿಮಗೆ ಓದಿನಲ್ಲಿರುವ ಆಸಕ್ತಿ ಮತ್ತು ಪುಸ್ತಕ ಪ್ರೇಮವನ್ನು ಅವರಿಗೆ ತೋರಿಸಿ.
- ತರಗತಿಯಲ್ಲಿ ವಿದ್ಯಾರ್ಥಿಗಳು 'ಏನು' ಓದುತ್ತಾರೆ ಎನ್ನುವುದು ನಿಮ್ಮ ಜವಾಬ್ದಾರಿ. ಅವರು ಓದುಗರಾಗಲು ಸ್ಫೂರ್ತಿ ನೀಡುವ ಸಂಪನ್ಮೂಲ ಮತ್ತು ಚಟುವಟಿಕೆಗಳಿಗಾಗಿ ಹುಡುಕಾಟ ನಡೆಸಿ. ವಿದ್ಯಾರ್ಥಿಗಳು ಶಾಲೆಯ ಹೊರಗೆ ಓದುತ್ತಿರುವುದಕ್ಕೆ ಸಹ ನಿಮಗಿರುವ ಆಸಕ್ತಿಯನ್ನು ವ್ಯಕ್ತ ಪಡಿಸಿ.
- ಈ ನಕ್ಷೆಯಲ್ಲಿ 'ಎಲ್ಲಿ' ಎನ್ನುವುದು ನಿಮ್ಮ ಶಾಲೆಯನ್ನು ಸೂಚಿಸುತ್ತದೆ; ಆದಾಗ್ಯೂ ನಿಮ್ಮ ವಿದ್ಯಾರ್ಥಿಗಳ ಮನೆ, ದೇವಸ್ಥಾನ ಮತ್ತು ಮಸೀದಿ ಅವರ ಪ್ರಾರಂಭಿಕ ಓದುವಿಕೆಯ ಅನುಭವಗಳಲ್ಲಿ ಪ್ರಮುಖವಾಗಿರುವ ಸಾಧ್ಯತೆಗಳಿರುತ್ತವೆ.
- ಓದುವಿಕೆಯ 'ಏಕೆ' ಪ್ರತೀ ವಿದ್ಯಾರ್ಥಿಗೂ ಅನನ್ಯವಾಗಿರುತ್ತದೆ. ಕೆಲವರು ಕುತೂಹಲಕ್ಕಾಗಿ ಓದಿದರೆ, ಇನ್ನೂ ಕೆಲವರು 'ಕರ್ತವ್ಯ' ಪ್ರಜ್ಞೆಯಿಂದ ಓದಬಹುದು.

## ಪ್ರಸಂಗ ಅಧ್ಯಯನ 2: 'ಬಸ್ಸಿನೊಳಗೆ ಹೋದ ಡಬ್ಬಗಳು'

*ಲತಾರವರು ಮೈಸೂರಿನಲ್ಲಿ ಒಂದನೇ ತರಗತಿ ಬೋಧಿಸುತ್ತಾರೆ. ಅವರು ತಮ್ಮ ವಿದ್ಯಾರ್ಥಿಗಳಿಗೆ 'ಬಸ್ಸಿನೊಳಗೆ ಹೋದ ಡಬ್ಬಗಳು' ಎನ್ನುವ ಸರಳ ಕಥೆಯಲ್ಲಿ ಮಕ್ಕಳನ್ನು ತೊಡಗಿಸಿಕೊಂಡ ರೀತಿಯನ್ನು ವಿವರಿಸಿದ್ದಾರೆ. (ಸಂಪನ್ಮೂಲ 1 ನೋಡಿ).*

ಕಥೆ ಬಹಳ ಸರಳವಾದದ್ದು. ಬಸ್ಸಿನೊಳಗೆ ಬರುವ ಪ್ರತೀ ವ್ಯಕ್ತಿಯೂ ಒಂದು ಡಬ್ಬ ತೆಗೆದುಕೊಂಡು ಬರುವುನ್ನು ಚಿತ್ರಿಸುವ ಕಥೆಯಿದು. ಪ್ರತೀ ಡಬ್ಬದಲ್ಲೂ ಹೊಸದು ಏನೋ ಇರುತ್ತದೆ. ಕ್ರಮೇಣವಾಗಿ ಬಸ್ಸು ತುಂಬಿ ಹೋಗಿ, ಸ್ವಲ್ಪ ಸಮಯದ ನಂತರ ಬೇರೆಯವರಿಗೆ ಜಾಗವೇ ಇರುವುದಿಲ್ಲ.

ಕಥೆ ಹೇಳುವ ಮೊದಲು ಡಬ್ಬಗಳಲ್ಲಿ ಏನಿರಬೇಕೆಂದು ವಿಚಾರ ಮಾಡಿಕೊಂಡೆ. ಮನೆಯಿಂದ ತಂದ ದೊಡ್ಡ ಕಾರ್ಡ್‌ಬೋರ್ಡ್ ಡಬ್ಬ ಮಕ್ಕಳಿಗೆ ತೋರಿಸಿ ಪ್ರಾರಂಭಿಸಿದೆ. ಅವರಿಗೆ ಸಾಕಷ್ಟು ಉತ್ಸಾಹ ಮೂಡಿತು. ನಂತರ ಕಥೆ ಹೇಳಿದೆ. ನಾನು '……….ಮತ್ತೆ ಆ ಡಬ್ಬದಲ್ಲಿ

ಇದ್ದಿದ್ದು………' ಅಂತ ಹೇಳಿ ಒಂದು ಕ್ಷಣ ತಡೆದು, ಅವರೂ ಹೇಳ ವುದಕ್ಕೆ ಅವಕಾಶ ಕೊಡುತ್ತಿದ್ದೆ. ಆ ಡಬ್ಬಗಳಲ್ಲಿರುವ ಸಾಮಾನುಗಳಲ್ಲಿ, ಗುಂಡಿಗಳ ಹಾಗೂ ಒಂದು ಹೋತದ ಬೊಂಬೆಯನ್ನೂ ಸೇರಿಸಿದ್ದೆ.

ಪ್ರತೀ ಸಂದರ್ಭದಲ್ಲೂ ಒಂದು ವಿದ್ಯಾರ್ಥಿ ಬಂದು ತರಗತಿಯ ಮುಂದೆ ಆ ವಸ್ತುವನ್ನು ಆಂಗಿಕ ಅಭಿನಯ ಮಾಡಿ ತೋರಿಸುವಂತೆ ಹೇಳಿದೆ. ಶಿವಾನಿ ತನ್ನ ಹೆಬ್ಬೆರಳ ಮತ್ತು ತೋರ್ಬೆರಳನ್ನು ಮಡಿಸಿ ಗುಂಡಿ ತೋರಿಸಿದಳ . ವಸಂತ ನಾಲ್ಕು ಬೆರಳುಗಳನ್ನು ತನ್ನ ಕೈ ಮೇಲೆ ಓಡಾಡಿಸಿ, ಹೋತವನ್ನು ತೋರಿಸಿದ.

ಕಥೆ ಒಂದು ಸಲ ಹೇಳಿ ಆದಮೇಲೆ, ಪುನಃ ಅದನ್ನು ಹೇಳಿದೆ. ಇನ್ನೊಮ್ಮೆ ಹೇಳ ವಾಗ ಮಧ್ಯದಲ್ಲಿ ತಡೆಯುತ್ತಿದ್ದೆ. ಇದರಿಂದ ನನ್ನ ವಿದ್ಯಾರ್ಥಿಗಳ ನಾನು ಹೇಳಿದ್ದನ್ನು ಪುನರುಚ್ಚರಿಸಬಹುದಾಗಿತ್ತು. ನಂತರ ತಿರುಗಿ ಇದೇ ಕಥೆ ಹೇಳಿದೆ. ಈಗ ಮಕ್ಕಳ ಕಥೆಯಲ್ಲೂ ಜೊತೆಗೆ ಸೇರಿಕೊಂಡು, ಆಂಗಿಕ ಅಭಿನಯವನ್ನೂ ಮಾಡುತ್ತಿದ್ದರು.

ಎರಡು ದಿನಗಳ ನಂತರ, ನನ್ನ ತರಗತಿಯ ವಿದ್ಯಾರ್ಥಿಗಳನ್ನು ಜೋಡಿಗಳಾಗಿ ಮಾಡಿದೆ. ಎಲ್ಲಿ ಸಾಧ್ಯವೋ ಅಲ್ಲಿ, ಆತ್ಮವಿಶ್ವಾಸವಿರುವ ಮಗುವಿನ ಜೊತೆ ಆತ್ಮವಿಶ್ವಾಸದ ಕೊರತೆ ಇರುವ ಮಗುವಿನೊಂದಿಗೆ ಜೋಡಿ ಮಾಡಿದೆ. ಇವರು ಪರಸ್ಪರರಿಗೆ 'ಬಸ್ಸಿನೊಳಹೋದ ಡಬ್ಬಗಳು' ಕಥೆಯನ್ನು ನೆನಪಿನಿಂದ ಹೇಳಬೇಕೆಂದು ಸೂಚಿಸಿದೆ.

ಇಬ್ಬರು ವಿದ್ಯಾರ್ಥಿಗಳ ಹಿಂದಿನ ಪಾಠ ಮಾಡುವಾಗ ಇರಲಿಲ್ಲವಾದ್ದರಿಂದ, ಅವರಿಬ್ಬರನ್ನು, ಅವರಿಗೆ ಬೆಂಬಲ ಕೊಡಬಲ್ಲ, ತಾವು ಕಲಿತದ್ದನ್ನು ವಿವರಿಸಬಲ್ಲ ಜೋಡಿಗಳನ್ನು ಆರಿಸಿ, ಗೈರುಹಾಜರಾದ ಮಕ್ಕಳನ್ನು ಅವರೊಡನೆ ಸೇರಿಸಿ ಮೂವರ ಗುಂಪುಗಳನ್ನಾಗಿ ಮಾಡಿದೆ. ನಂತರ ಇಡೀ ತರಗತಿಗೆ, ಬಣ್ಣದ ಚಿತ್ರಗಳಿರುವ ನಿಯತಕಾಲಿಕ (ಮ್ಯಾಗಜೀನ್) ಗಳಿಂದ ಈ ಕಥೆಗೆ ಸಂಬಂಧವಿರುವ ಚಿತ್ರಗಳನ್ನು ಕತ್ತರಿಸಲು ಸಹಾಯ ಕೋರಿದೆ. ನಾನು ತಂದಿದ್ದ ಕಾರ್ಡ್‌ಬೋರ್ಡ್ ಡಬ್ಬದ ಮೇಲೆ ಈ ಚಿತ್ರಗಳನ್ನು ಎಲ್ಲರೂ ಜೊತೆಗೂಡಿ ಅಂಟಿಸಿ, ಚಿತ್ರಗಳ ಪಕ್ಕ ಅವುಗಳ ಹೆಸರುಗಳನ್ನು ಬರೆದೆವು.

ಅದರ ಮುಂದಿನ ವಾರ, ನನಗೆ ದೋಣಿ ಪ್ರಯಾಣ ಕುರಿತಾದ ಚಂದದ ಚಿತ್ರ ಪುಸ್ತಕ ಕಾಣಿಸಿತು. ಅದನ್ನು ನೋಡಿದ ಕೂಡಲೇ ಈ ಕಥೆಗೆ ಪರ್ಯಾಯ ಕಥೆ ಹೊಳೆಯಿತು - 'ದೋಣಿಯೊಳಗೆ ಹೋದ ಡಬ್ಬಗಳು'. ಈ ಕಥೆಗೆ, ನನ್ನ ವಿದ್ಯಾರ್ಥಿಗಳಿಂದಲೇ ಪ್ರತೀ ಡಬ್ಬದಲ್ಲಿ ಏನಿದೆ ಎಂದು ಹೇಳಿಸುತ್ತೇನೇ ಹೊರತು ನಾನು ಹೇಳುವುದಿಲ್ಲ.

**ಚಿಂತನೆಗೊಂದು ಕ್ಷಣ**

ಕೆಳಗಿನ ಪ್ರಶ್ನೆಗಳ ಬಗ್ಗೆ ಆಲೋಚಿಸಿ ಹಾಗೂ ಸಾಧ್ಯವಿದ್ದಲ್ಲಿ ನಿಮ್ಮ ಸಹೋದ್ಯೋಗಿಯೊಂದಿಗೆ ಚರ್ಚಿಸಿ:

- '*ಬಸ್ಸಿನೊಳಗೆ ಹೋದ ಡಬ್ಬಗಳ*' ಯಾವ ಕಾರಣಕ್ಕಾಗಿ ಓದಿನ ಚಟುವಟಿಕೆಯಾಗುತ್ತದೆ?
- ಲತಾರವರ ವಿದ್ಯಾರ್ಥಿಗಳಿಗೆ ಭಾಷೆ ಕುರಿತಾಗಿ ಆದ ಕಲಿಕೆ ಏನು?
- ಅವರು ಅಕ್ಷರಗಳ ಮತ್ತು ಧ್ವನಿಯ ಬಗ್ಗೆ ಏನು ಕಲಿತರು?

ನಿಮ್ಮ ಯೋಚನೆಗಳನ್ನುಗಳನ್ನು ನಮ್ಮದರೊಂದಿಗೆ ಹೋಲಿಸಿಕೊಳ್ಳಿ

ಪ್ರಾರಂಭಿಕ ಓದುವಿಕೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲೇ ಬೇಕು. ಲತಾರವರ ತರಗತಿಯಲ್ಲಿದ್ದ ಪುಟ್ಟ ವಿದ್ಯಾರ್ಥಿಗಳ '*ಬಸ್ಸಿನೊಳಗೆ ಹೋದ ಡಬ್ಬಗಳ*' ಕಥೆಯಲ್ಲಿ ಸಕ್ರಿಯವಾಗಲು ತೊಡಗಿಕೊಳ್ಳಲು ಕಾರಣಗಳೇನೆಂದರೆ:

- ಅವರೆಲ್ಲರೂ ಕಥೆಯನ್ನು ಒಟ್ಟಿಗೆ ಕೇಳಿಸಿಕೊಂಡರು
- ಅವರು ತಮ್ಮ ಕಂಠ ಮತ್ತು ಅಂಗಾಂಗಳನ್ನು ಬಳಸಿಕೊಂಡು, ಮುಖ್ಯ ವಾಕ್ಯಾಂಶ '…………ಮತ್ತೆ ಆ ಡಬ್ಬದಲ್ಲಿ ಇದ್ದಿದ್ದು………' ವನ್ನು ಮತ್ತೆ ಮತ್ತೆ ಹೇಳುತ್ತಿದ್ದರು ಹಾಗೂ ತಮ್ಮ ಸಹಪಾಠಿಗಳ ಮಾಡುತ್ತಿದ್ದ ಹೊಸ ಹೊಸ ಅಂಗಚೇಷ್ಟೆಗಳನ್ನು ಅನುಕರಿಸಿ ಅವರು ಮಾಡುತ್ತಿದಂತೆಯೇ ಮಾಡಲು ಪ್ರಯತ್ನಿಸುತ್ತಿದ್ದರು.
- ಡಬ್ಬವನ್ನು, ಚಿತ್ರ ಮತ್ತು ಹೆಸರು ಪಟ್ಟಿಗಳನ್ನು ಬಳಸಿ ಅಲಂಕಾರ ಮಾಡುವಾಗ, ತಮಗೆ ತಿಳಿದ ಕಥೆಯಲ್ಲಿ ಬಂದಂತಹ ಧ್ವನಿಗಳಿಗೂ ಅಕ್ಷರ, ಪದ ಮತ್ತು ವಾಕ್ಯಾಂಶಗಳಿಗೂ ಸಂಬಂಧ ಕಲ್ಪಿಸಿದರು.

ಮಕ್ಕಳ , ತಮಗೆ ಖುಷಿ ಕೊಡುವಂತಹ ಕಥೆಗಳನ್ನು ಪದೇ ಪದೇ ಕೇಳಿ ತೃಪ್ತಿಪಟ್ಟುಕೊಳ್ಳುತ್ತಾರೆ. ಇದರಿಂದ ಅವರಿಗೆ ಪಾತ್ರಗಳನ್ನು ಅರಿಯಲು, ಮುಂದೇನಾಗುತ್ತದೆ ಎಂದು ಊಹಿಸಲು ಮತ್ತು ತಾವೇ ಕಥೆಯನ್ನು ಹೇಳಲು ಸಾಧ್ಯವಾಗುತ್ತದೆ.

## ಚಟುವಟಿಕೆ 2: ಸರಳ ಕಥೆಯನ್ನು ಅತಿಶಯದನ್ನಾಗಿ ಮಾಡುವ ಸಂಪನ್ಮೂಲಗಳನ್ನು ಪತ್ತೆ ಹಚ್ಚುವುದು

ಈ ಚಟಿವಟಿಕೆಯಲ್ಲಿ ನೀವು, ಪ್ರಸಂಗ ಅಧ್ಯಯನ 2 ರ *'ಬಸ್ಸಿನೊಳಗೆ ಹೋದ ಡಬ್ಬಗಳ' ಅಥವಾ ನಿಮ್ಮ ಆಯ್ಕೆಯ ಒಂದು ಕಥೆಯನ್ನು* ಆರಂಭಿಕ ಓದಿಗಾಗಿ ಬಳಸುವ ಸಲುವಾಗಿ ಕೆಲವು ಚಟುವಟಿಕೆಗಳನ್ನು ಯೋಜಿಸುವಿರಿ. ನಿಮ್ಮ ತರಗತಿ, ಮನೆ ಮತ್ತು ಸಮುದಾಯದಲ್ಲಿ ಏನಿದೆ ಎನ್ನುವುದನ್ನು ನೋಡುವುದರಿಂದ ಪ್ರಾರಂಭಿಸಿ. ನೀವು ಹೇಳ ವ ಕಥೆಗೆ ಪೂರಕವಾಗಿ ನಿಮಗೆ ಯಾವ ಸಂಪನ್ಮೂಲಗಳು ಸಿಗುತ್ತವೆ? ಕೆಳಗಿನ ಅಂಶಗಳನ್ನು ಪರಿಗಣಿಸಿ:

- ಸೂಕ್ತ ವಸ್ತುಗಳ
- ಚಿತ್ರಗಳು
- ಕೊಡುಗೆ ನೀಡಬಲ್ಲ ವ್ಯಕ್ತಿಗಳು
- ವಸ್ತುಗಳನ್ನು ಮಾಡಲು ಸಿಗುವ ಸಾಮಗ್ರಿಗಳು

ಕಥೆಗೆ ಪೂರಕವಾಗಿ ನೀವು ಗುರುತಿಸಿದ ಸಂಪನ್ಮೂಲಗಳನ್ನು ಬಳಸಲು ನಿಮ್ಮ ಮನಸ್ಸಿನಲ್ಲಿ ಮೂಡುವ ಹೊಳಹುಗಳನ್ನೆಲ್ಲ ಪಟ್ಟಿ ಮಾಡಿಕೊಳ್ಳಿ. ಕೆಲವು ಸಲಹೆಗಳ ಹೀಗಿವೆ:

- ಕಥೆಯಲ್ಲಿರುವ ಹಲವು ಪದಗಳನ್ನು, ಚಿತ್ರ ಅಥವಾ ವಸ್ತುಗಳ ಮೂಲಕ ನಿರೂಪಿಸಲು ಸಾಧ್ಯವಿರುತ್ತದೆ. *'ಬಸ್ಸಿನೊಳಗೆ ಹೋದ ಡಬ್ಬಗಳು'* ಕಥೆಗೆ ವಿವಿಧ ಗಾತ್ರದ ಡಬ್ಬಗಳ , ಆಟದ ಬಸ್ಸು, ಬಸ್ಸಿನ ದೊಡ್ಡ ಪೋಸ್ಟರ್ ಮತ್ತು ಡಬ್ಬದಲ್ಲಿರುವ ವಸ್ತುಗಳನ್ನು ತೋರಿಸಲು ಹಲವು ಚಿಕ್ಕ ಪುಟ್ಟ ವಸ್ತುಗಳು ಅಥವಾ ವಸ್ತುಗಳ ಚಿತ್ರಗಳನ್ನು ಬಳಸಬಹುದೆಂದು ನಿಮಗೆ ಅನ್ನಿಸಿರಬಹುದು.
- ಈ ಕಥಗೆ ಕೊಡುಗೆ ನೀಡಬಲ್ಲ ವ್ಯಕ್ತಿಗಳ ನಿಮ್ಮ ಮನಸ್ಸಿನಲ್ಲಿ ಹಾದು ಹೋದರೇ? ನಿಮ್ಮ ವಿದ್ಯಾರ್ಥಿಗಳ ಮನೆಯವರು ಯಾರಾದರೂ ಬಸ್ಸು ಓಡಿಸುವವರಾಗಿರಬಹುದೇ? ಹಾಗಿದ್ದಲ್ಲಿ ಅವರನ್ನು ಅಥವಾ ಆ ಕುಟುಂಬದ ವಿದ್ಯಾರ್ಥಿ ಸ್ವಲ್ಪ ದೊಡ್ಡವನು/ಳು ಆಗಿದ್ದರೆ, ವಿದ್ಯಾರ್ಥಿಯನ್ನೇ ಮಾತನಾಡಲು ಕರೆಸಬಹುದು.
- ನಿಮ್ಮ ವಿದ್ಯಾರ್ಥಿಗಳೊಂದಿಗೆ ಕಥೆಯ ಪದಗಳು ಮತ್ತು ಚಿತ್ರಗಳ ಭಿತ್ತಿಚಿತ್ರ (ಪೋಸ್ಟರ್) ಒಂದನ್ನು ರಚಿಸಬಹುದು.
- ಒಬ್ಬ ವಿದ್ಯಾರ್ಥಿಯನ್ನು ಬಸ್ ಚಾಲಕನನ್ನಾಗಿ ಮಾಡಿ ಒಂದು ಸರಳ ಪಾತ್ರಾಭಿನಯವನ್ನೂ ಯೋಜಿಸಬಹುದು. ತರಗತಿಯನ್ನು ಎರಡು ಗುಂಪುಗಳನ್ನಾಗಿ ಮಾಡಿಕೊಳ್ಳಿ. ಒಂದು ಗುಂಪಿನವರು ಒಂದು ಸಣ್ಣ ಡಬ್ಬದಲ್ಲಿ ಯಾವುದಾದರೂ ವಸ್ತುವನ್ನು ಹಾಕಿಕೊಂಡು ಬರಲಿ. ಇನ್ನೊಂದು ಗುಂಪಿನವರು ಅದರಲ್ಲೇನಿದೆ ಎಂದು ಊಹಿಸಲಿ. ಪರ್ಯಾಯವಾಗಿ, ಕಥೆಯನ್ನು ಹಾಡಾಗಿ ರೂಪಾಂತರಿಸಿ, ಮಕ್ಕಳು ಹಾಡಬಹುದು.

ನಿಮ್ಮ ವಿಚಾರ ಮತ್ತು ಸಂಪನ್ಮೂಲಗಳನ್ನು ತರಗತಿಯಲ್ಲಿ ಉಪಯೋಗಿಸಲು ಒಂದು ಯೋಜನೆ ತಯಾರಿಸಿ. ಹಲವು ದಿನಗಳು ಮಾಡಬಹುದಾದ ಅಲ್ಪಾವಧಿ ಚಟುವಟಿಕೆಗಳ , ಒಂದು ಅಥವಾ ಎರಡು ದೀರ್ಘ ಚಟುವಟಿಕೆಗಳಿಗಿಂತ ಹೆಚ್ಚು ಪರಿಣಾಮಕಾರಿ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ. ನಿಮ್ಮ ವಿಚಾರಗಳನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ನಂತರ ಜಾರಿಗೆ ತರಬಹುದು.

### ಚಿಂತನೆಗೊಂದು ಕ್ಷಣ....

- ಈ ಚಟುವಟಿಕೆಗಳೆಲ್ಲದರಿಂದ ನಿಮ್ಮ ವಿದ್ಯಾರ್ಥಿಗಳು ಏನು ಕಲಿತರು? ನಿಮಗೆ ಹೇಗೆ ತಿಳಿಯಿತು?
- ಪ್ರತಿಯೊಬ್ಬರೂ ಸಕ್ರಿಯವಾಗಿ ತೊಡಗಿಕೊಂಡಿದ್ದರೆ? ಇದನ್ನು ಖಚಿತಪಡಿಸಿಕೊಳ್ಳಲು ನೀವು ಮಾಡಿದ್ದರಲ್ಲಿ ಯಾವುದನ್ನು ಬೇರೆ ರೀತಿಯಲ್ಲಿ ಮಾಡುವ ಸಾಧ್ಯತೆ ಇತ್ತು?

ಕಥೆಹೇಳುವುದು - ನೆನಪಿನಿಂದಲೇ ಕಥೆಯನ್ನು ಹೇಳ ವುದು - ವಿದ್ಯಾರ್ಥಿಗಳನ್ನು ಓದಿಗೆ ಪರಿಚಯಿಸುವ ಒಂದು ಮಾರ್ಗ. ಇದರಿಂದ ಅವರಿಗೆ ಕಥೆಯ ಓಟದ ಬಗ್ಗೆ ತಿಳಿಯುತ್ತದೆ ಮತ್ತು ಮುಂದೇನಾಗುತ್ತದೆ ಎನ್ನುವ ಕುತೂಹಲವನ್ನು ಕೆರಳಿಸುತ್ತದೆ. ಕಥೆಯ ಕುರಿತಾದ ನಿಮ್ಮ

ಪ್ರಶ್ನೆಗಳಿಗೆ ಅವರ ಪ್ರತಿಕ್ರಿಯೆ ಮತ್ತು ಅವರು ಕಥೆಯನ್ನು ತಾವಾಗಿಯೇ ಅಥವಾ ನಿಮ್ಮ ಸಹಾಯದಿಂದ ಹೇಳುತ್ತಾರೆಯೆ ಎನ್ನುವುದನ್ನು ಗಮನಿಸಿ ಅವರು ಏನನ್ನು ಕಲಿತಿದ್ದಾರೆ ಎನ್ನುವುದನ್ನು ಮೌಲ್ಯಾಂಕನ ಮಾಡಬಹುದು. ನಿಮ್ಮ ಎಲ್ಲ ವಿದ್ಯಾರ್ಥಿಗಳು ಅರ್ಥೈಸಿಕೊಂಡಿದ್ದಾರೆಯೇ ಎಂದು ತಿಳಿದುಕೊಳ್ಳಿ ಮತ್ತು ಅವರಿಗೆ ಕಥೆ ತಿಳಿಯಲಾಗಿಲ್ಲ ಎಂದು ನಿಮಗೆ ಅನ್ನಿಸಿದಲ್ಲಿ, ಕಥೆಯನ್ನು ಬೇರೆ ಬೇರೆ ರೀತಿಗಳಲ್ಲಿ ಪುನಃ ಹೇಳಿ.

ನಿಮ್ಮ ವಿದ್ಯಾರ್ಥಿಗಳ ಪ್ರಾರಂಭಿಕ ಓದಿನ ಕೌಶಲಗಳನ್ನು ಬೆಳೆಸಲು ಇನ್ನೊಂದು ಮಾರ್ಗವೆಂದರೆ ಪುಸ್ತಕಗಳನ್ನು ಗಟ್ಟಿಯಾಗಿ ಓದುವುದು.

## 2 ನಿಮ್ಮ ವಿದ್ಯಾರ್ಥಿಗಳಿಗೆ ಗಟ್ಟಿಯಾಗಿ ಓದುವುದು

ಪುಸ್ತಕಗಳನ್ನು ಗಟ್ಟಿಯಾಗಿ ಓದುವುದರಿಂದ ಮತ್ತು ಪುಟದಲ್ಲಿ ಪದಗಳ ಮೇಲೆ ಬೆರಳಿಟ್ಟು ಓದುವುದರಿಂದ ಮಕ್ಕಳಿಗೆ ಮುದ್ರಿತ ಸಾಮಗ್ರಿಯಲ್ಲಿ ಅರ್ಥಪೂರ್ಣವಾದದ್ದು ಏನೋ ಇದೆ ಎಂದು ತಿಳಿಯಲು ಸಹಾಯಕಾರಿಯಾಗುತ್ತದೆ. ನಿಮ್ಮನ್ನು ಗಮನಿಸಿ ಅವರು ಪುಸ್ತಕ ಹಿಡಿಯುವ ರೀತಿ, ಪುಟ ತಿರುಗಿಸುವುದು ಮತ್ತು ಪಠ್ಯ ಮೊದಲಿನಿಂದ ಕೊನೆಯವರೆವಗೂ, ಎಡದಿಂದ ಬಲಕ್ಕೆ ಮೇಲಿನಿಂದ ಕೆಳಕ್ಕೆ ಅನುಕ್ರಮವಾಗಿರುತ್ತದೆ ಎನ್ನುವುದನ್ನು ತಿಳಿಯುತ್ತಾರೆ.



**ಚಿತ್ರ 2**

ಪುಟದಲ್ಲಿ ಪದಗಳ ಮೇಲೆ ಬೆರಳಿಟ್ಟು ಓದುವುದರಿಂದ ಮುದ್ರಿತ ಸಾಮಗ್ರಿಯಲ್ಲಿ ಅರ್ಥಪೂರ್ಣವಾದದ್ದು ಏನೋ ಇದೆ ಎಂದು ತಿಳಿಯಲು ಸಹಾಯಕಾರಿಯಾಗುತ್ತದೆ

ನೀವು ಒಳ್ಳೆಯ ಓದುಗಾರಿಕೆ ಅಭ್ಯಾಸಗಳನ್ನು ಮಾದರಿ ಮಾಡಿದರೆ, ನಿಮ್ಮ ವಿದ್ಯಾರ್ಥಿಗಳು ನಿಮ್ಮನ್ನೇ ಅನುಕರಿಸುವರು. ಅವರು ಸ್ವಂತವಾಗಿ ಪುಸ್ತಕಗಳನ್ನು 'ಓದಲು' ಪ್ರಯತ್ನಿಸುವರು - ಕೆಲವು ಸಲ ಕಥೆಯ ಪದಗಳನ್ನು ನೆನಪಿನಿಂದ ಹೇಳುವರು, ಚಿತ್ರಗಳನ್ನು ಬಳಸಿಕೊಳ್ಳುವರು ಮತ್ತು ಕೆಲವು ಸಲ ತಮ್ಮ ಅನುಭವ ಮತ್ತು ಕಲ್ಪನೆಯನ್ನು ಮೇಳೈಸಿ ತಾವೇ ಕಥೆಯನ್ನು ಹೆಣೆಯುವರು. ಇವೆಲ್ಲವೂ ಅವರ ಓದುವಿಕೆಯ ಬೆಳವಣಿಗೆಯನ್ನು ತೋರಿಸುವ ಉತ್ತೇಜಕ ಸಂಕೇತಗಳು. ಆದ್ದರಿಂದ ಇವುಗಳನ್ನು ಖಂಡಿತವಾಗಿಯೂ ಗಮನಿಸಿ ಪ್ರೋತ್ಸಾಹಿಸಬೇಕು.

### ಪ್ರಸಂಗ ಅಧ್ಯಯನ 3: ಓದುವಿಕೆಗೆ ಅನುಕರಣೀಯ ವ್ಯಕ್ತಿ

*ಸರೋಜಾರವರು ಚಾಮರಾಜನಗರದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು. ಅವರ ವಿದ್ಯಾರ್ಥಿಗಳ ಓದಿಗೆ ತಾವು ಅನುಕರಣೀಯ ವ್ಯಕ್ತಿಯಾಗುವ ಪ್ರಯತ್ನವನ್ನು ಅವರು ಈ ರೀತಿಯಾಗಿ ವಿವರಿಸಿದ್ದಾರೆ.*

ಪದ್ಯವಾಗಲೀ ಸಣ್ಣ ಕಥೆಯಾಗಲೀ, ನನ್ನ ವಿದ್ಯಾರ್ಥಿಗಳಿಗೆ ನಾನು ಪ್ರತೀ ದಿನವೂ ಗಟ್ಟಿಯಾಗಿ ಓದುತ್ತೇನೆ. ಬೇಕಂತಲೇ ನಿಧಾನವಾಗಿ ಜಾಗರೂಕತೆಯಿಂದ ಪುಸ್ತಕವನ್ನು ತೆರೆಯುತ್ತೇನೆ, ಅಷ್ಟೇ ಜಾಗರೂಕಳಾಗಿ ಪುಟ ತಿರುವುತ್ತೇನೆ, ಆಯ್ದ ಪದ್ಯ ಅಥವಾ ಕಥೆಯನ್ನು ಭಾವನಾ ಪೂರಿತಳಾಗಿ ಓದುತ್ತೇನೆ. ಓದುವಾಗ ಬೆರಳನ್ನು ನಾನು ಓದುತ್ತಿರುವ ಪದದ ಮೇಲೆ ಇರಿಸುತ್ತೇನೆ ಮತ್ತು ಮಕ್ಕಳಿಗೆ ಚಿತ್ರವನ್ನು ತೋರಿಸುತ್ತೇನೆ. ಹಲವು ಸಲ ಒಂದೇ ಪದ್ಯ ಅಥವಾ ಕಥೆಯನ್ನು ಒಂದಕ್ಕಿಂತ ಹೆಚ್ಚು ಬಾರಿ, ಬೇರೆ ಬೇರೆ ಸನ್ನಿವೇಶಗಳಲ್ಲಿ ಓದುತ್ತೇನೆ. ಇದನ್ನು ಮಾಡಲು ಪ್ರಾರಂಭಿಸಿದ ನಂತರ, ನನ್ನ ಪುಟ್ಟ ವಿದ್ಯಾರ್ಥಿಗಳೂ ಪುಸ್ತಕವನ್ನು ನಾಜೂಕಾಗಿ ಸಂಭಾಳಿಸುವುದನ್ನು ಗಮನಿಸಿದ್ದೇನೆ. ಅವರು ಪುಸ್ತಕವನ್ನು ಮೇಲಿನ ಭಾಗ ಯಾವುದು ಎಂದು ತಿಳಿದಿದ್ದಾರೆ, ಪುಟವನ್ನು ಒಂದಾದ ಮೇಲೆ ಒಂದು ತಿರುವುತ್ತಾರೆ, ಚಿತ್ರವನ್ನು

ಆಸಕ್ತಿಯಿಂದ ನೋಡುತ್ತಾರೆ ಮತ್ತೆ ಕೆಲವು ಸಲ ಅವರ ಬೆರಳನ್ನು ಪದದ ಕೆಳಗೆ ಓಡಿಸುತ್ತಾರೆ. ಅವರಲ್ಲಿ ಒಬ್ಬರಾದ ಮೇಲೆ ಒಬ್ಬರನ್ನು ಗಮನಿಸಿ - ಯಾರು ಚಿತ್ರ ನೋಡುತ್ತಿದ್ದಾರೆ, ಯಾರು ಓದುವಂತೆ ನಟಿಸಿತ್ತಿದ್ದಾರೆ, ಓದಲು ಪ್ರಯತ್ನಿಸುತ್ತಿದ್ದಾರೆ ಅಥವಾ ಎಲ್ಲ ಅಥವಾ ಹಲವಾರು ಪದಗಳನ್ನು ಓದುತ್ತಿದ್ದಾರೆ - ನಾನು ಅವರ ಕೌಶಲ ಗಳಿಕೆಯಲ್ಲಿನ ವೈಯಕ್ತಿಕ ಪ್ರಗತಿಯನ್ನು ಪರಿವೀಕ್ಷಿಸಬಹುದು.

### ಚಟುವಟಿಕೆ 3: ನಿಮ್ಮ ವಿದ್ಯಾರ್ಥಿಗಳಿಗೆ ಗಟ್ಟಿಯಾಗಿ ಓದುವುದು

ಪ್ರಸಂಗ ಅಧ್ಯಯನ 3ನ್ನು ಬಳಸಿ ಮತ್ತು ಸಂಪನ್ಮೂಲ 2 ನ್ನು ಪರಾಮರ್ಶಿಸಿ, ವಿದ್ಯಾರ್ಥಿಗಳಿಗೆ ಗಟ್ಟಿಯಾಗಿ ಓದುವ ಅವಧಿಯನ್ನು ಯೋಜಿಸಿ, ಅನುಷ್ಠಾನಕ್ಕೆ ತಂದು, ನಿಮ್ಮದೇ ಮೌಲ್ಯಮಾಪನ ಮಾಡಿಕೊಳ್ಳಿ. ನಿಮ್ಮ ಅಭಿಪ್ರಾಯ, ಉದ್ದೇಶ ಮತ್ತು ಚಿಂತನೆಗಳನ್ನು, ಸಾಧ್ಯವಿದ್ದಲ್ಲಿ ಸಹೋದ್ಯೋಗಿಯೊಂದಿಗೆ ಚರ್ಚಿಸಿ.

ಚಿಕ್ಕ ಮಕ್ಕಳು ಆರಂಭಿಕ ಓದುವಿಕೆಯಲ್ಲಿ ಬಳಸುವ ತಂತ್ರಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗಿದೆ.

## 3 ಓದಿಗೆ ದಾರಿಗಳು

ಪುಟ್ಟ ಮಕ್ಕಳು ಓದುವುದನ್ನು ಹಲವು ರೀತಿಗಳಲ್ಲಿ ಕಲಿಯುತ್ತಾರೆ

- ಕಥೆಗಳನ್ನು ಕೇಳಿ, ಅದರಲ್ಲಿರುವ ಭಾಷೆಯನ್ನು ಪುನರುಚ್ಚಾರ ಮಾಡಿ ಕಲಿಯುತ್ತಾರೆ. ಹಾಗೆ ಮಾಡುವಾಗ ಅವರು ಭಾಷೆಯ ತುಣುಕುಗಳನ್ನು - ಅಂದರೆ ಅಭಿವ್ಯಕ್ತಿ, ವಾಕ್ಯಾಂಶ ಮತ್ತು ವಾಕ್ಯಗಳನ್ನು- ಅಂತರ್ಗತ ಮಾಡಿಕೊಂಡು ಅವುಗಳನ್ನು ಓದುತ್ತಾರೆ.
- ಪ್ರತೀ ಅಕ್ಷರವನ್ನು ಮತ್ತು ಪದವನ್ನು ಒಂದಾದ ಮೇಲೊಂದು ಓದಿದಾಗ ಪದಗಳು ಯಾವುದರಿಂದ ಮಾಡಲ್ಪಟ್ಟಿವೆ ಮತ್ತು ಪ್ರತೀ ಪದದ ಅರ್ಥವೇನು ಎಂದು ತಿಳಿಯುತ್ತಾರೆ
- ಓದಲು ಮತ್ತು ಪದಗಳ ಅರ್ಥ ತಿಳಿಯಲು ಚಿತ್ರಗಳ ಸಹಾಯ ತೆಗೆದುಕೊಳ್ಳುತ್ತಾರೆ.

ವಾಸ್ತವವಾಗಿ ಅನೇಕ ಮಕ್ಕಳಲ್ಲಿ, ಈ ಎಲ್ಲ ತಂತ್ರಗಳ ಮಿಶ್ರಣವಿರುತ್ತದೆ.

### ಪ್ರಸಂಗ ಅಧ್ಯಯನ 4: ಸಾರಾರವರ ವಿದ್ಯಾರ್ಥಿಗಳು ಓದಿಗಾಗಿ ಬಳಸುವ ತಂತ್ರಗಳು

*ಸಾರಾರವರು ಹಾವೇರಿಯಲ್ಲಿ ಒಂದನೇ ತರಗತಿಯ ಶಿಕ್ಷಕಿ. ಇವರು ತಮ್ಮ ಪುಟ್ಟ ವಿದ್ಯಾರ್ಥಿಗಳು ಓದಿಗಾಗಿ ಬಳಸಿದ ತಂತ್ರಗಳನ್ನು ವಿವರಿಸಿದ್ದಾರೆ.*

ಸುರಭಿ ಬಹಳ ಹುಮ್ಮಸ್ಸಿರುವ ನಾಟಕೀಯವಾಗಿ ಕಥೆ ಹೇಳುವಾಕೆ. ಅವಳು ಯಾವಾಗಲೂ ಅವಳ ಸಹಪಾಠಿಗಳಿಗೆ ಕಥೆ ಹೇಳುತ್ತಿದ್ದಳು. ಕೆಲವನ್ನು ನೆನಪಿನಿಂದ ಹೇಳುತ್ತಿದ್ದಳು, ಮತ್ತೆ ಕೆಲವು ಬಾರಿ ಅಲ್ಲೇ ಸಮಯ ಸ್ಪೂರ್ತಿಯಿಂದ ಕಥೆ ಕಟ್ಟಿ ಹೇಳುತ್ತಿದ್ದಳು. ನಾನು ತರಗತಿಯಲ್ಲಿ ಕಥೆ ಹೇಳುವಾಗ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದಳು; ನಾನೇನಾದರೂ ಯಾವುದಾದರೂ ಮುಖ್ಯ ಪದ ಅಥವಾ ವಾಕ್ಯಾಂಶವನ್ನು ಪುನರುಚ್ಚರಿಸಿದರೆ ತಾನೂ ನನ್ನ ಜೊತೆಗೆ ಅದನ್ನು ಹೇಳುತ್ತಿದ್ದಳು. ಸುರಭಿ ತಾನೇ ಸ್ವಂತವಾಗಿ ಗಟ್ಟಿಯಾಗಿ ಓದುವಾಗ ಕೆಲವು ತಪ್ಪುಗಳನ್ನು ಮಾಡುತ್ತಿದ್ದಳು ಉದಾಹರಣೆಗೆ ಕುದುರೆಗೆ ಕತ್ತೆ ಎಂದು ಓದುತ್ತಿದ್ದಳು, ಆದರೆ ಅವಳು ಬಳಸಿದ ಪದ ಯಾವಾಗಲೂ ಅರ್ಥಪೂರ್ಣವಾಗಿಯೇ ಇರುತ್ತಿತ್ತು. ಪದಗಳನ್ನು ಗುರುತಿಸುವ ಕೌಶಲವನ್ನು ಸಬಲಗೊಳಿಸಲು ಅವಳಿಗೆ ಸರಳ ಪದಗಳಿರುವ ಪುಸ್ತಕವನ್ನು ಕೊಡಲು ನಿರ್ಧರಿಸಿದೆ. ಅವಳಿಗೆ ಬಣ್ಣದ ಕುರಿತಾಗಿ ಇರುವ ಪುಸ್ತಕವೊಂದನ್ನು ಕೊಟ್ಟೆ. ಪುಸ್ತಕ ಕೊಟ್ಟ ತಕ್ಷಣ ಸುರಭಿ ಅದರ ಮುಖ ಪುಟ ನೋಡಿ, ಒಳಗಿನ ಪುಟಗಳನ್ನು ತಿರುವಿ ಹಾಕಿ, ಉದ್ವೇಗದಿಂದ 'ಈ ಪುಸ್ತಕ ಬಣ್ಣಗಳ ಕುರಿತಾಗಿದೆ! ಕೆಂಪು, ಹಳದಿ, ನೀಲಿ ವಸ್ತುಗಳನ್ನು ಎಲ್ಲಿ ನೋಡಬಹುದು- ಕಾರ್ ಮೇಲೆ, ದಾರಿಯಲ್ಲಿ, ಮನೆಯಲ್ಲಿ, ಹೂವುಗಳಲ್ಲಿ - ಅನ್ನೋದೆಲ್ಲ ಇದೆ. ನನಗೆ ಇದನ್ನು ಓದಕ್ಕೆ ಆಗುತ್ತೆ!' ನಾನು ಮೆಲ್ಲಗೆ ಅವಳಿಗೆ ಪ್ರತೀ ಪದವನ್ನು ಓದಲು ಪ್ರೋತ್ಸಾಹ ನೀಡಿದೆ.

ಮಧುವಿಗೆ ಓದುವಾಗ ಸರಿಯಾಗಿಯೇ ಓದಬೇಕೆನ್ನುವ ಹಂಬಲವಿತ್ತು. ಪ್ರತೀ ಪದದಲ್ಲೂ ಅಕ್ಷರವನ್ನು ಹೇಳುತ್ತಾ ನಿಧಾನವಾಗಿ ಆದರೆ

ಸರಿಯಾಗಿಯೇ ಓದುತ್ತಿದ್ದ. ಅವನಿಗೆ ತಿಳಿಯದ ಪದ ಬಂದರೆ, ಅವನು ಓದುವುದನ್ನೇ ನಿಲ್ಲಿಸುತ್ತಿದ್ದ. ಕಷ್ಟ ಪಟ್ಟು ಓದಿದರೂ, ಪಠ್ಯದ ಅರ್ಥ ತಿಳಿಯಲಾರದೆ ಅವನಿಗೆ ನಿರಾಸೆಯಾಗುತ್ತಿತ್ತು. ನಾನು ಹೇಳುವ ಕಥೆ ಕೇಳಿ, ಅದೇ ಕಥೆಯನ್ನು ತನ್ನದೇ ಪದಗಳನ್ನು ಉಪಯೋಗಿಸಿಕೊಂಡು ಸ್ವಂತವಾಗಿ ಮತ್ತೊಬ್ಬರಿಗೆ ಅವನು ಕಥೆ ಹೇಳುವಂತೆ ಸೂಚಿಸಬೇಕೆಂದು ನಿರ್ಧಾರ ಮಾಡಿಕೊಂಡೆ. ನಾನು ಓದುತ್ತಿರುವಾಗ ನನ್ನೊಟ್ಟಿಗೆ ಮತ್ತು ಇತರ ವಿದ್ಯಾರ್ಥಿಗಳ ಜೊತೆಗೆ ಗಟ್ಟಿಯಾಗಿ ಓದಲಿಕ್ಕೆ ಹೇಳಿದೆ ಮತ್ತು ಸಣ್ಣ ಪುಟ್ಟ ತಪ್ಪುಗಳಾದರೆ ತಲೆ ಕೆಡಿಸಿಕೊಳ್ಳಬಾರದೆಂದು ತಿಳಿಸಿದೆ.

ಪ್ರಮೀಳ, ನಾನು ತರಗತಿಯಲ್ಲಿ ಗಟ್ಟಿಯಾಗಿ ಓದುತ್ತಿದ್ದ ಕಥೆಗಳನ್ನು ಸಂತೋಷದಿಂದ ಕೇಳಿಸಿಕೊಳ್ಳುತ್ತಿದ್ದಳು. ನಾನು ಓದಿದ ಪುಸ್ತಕವನ್ನೇ ಅವಳು ಗಟ್ಟಿಯಾಗಿ ಓದುತ್ತಾ ಇದ್ದದ್ದನ್ನು ಅನೇಕ ಸಲ ಗಮನಿಸಿದ್ದೆ. ಒಂದು ದಿನ ಅವಳು ಚಿತ್ರಗಳು ಮತ್ತು ಸರಳ ವಾಕ್ಯಗಳಿದ್ದ ಪುಸ್ತಕವನ್ನು ತಲ್ಲೀನಳಾಗಿ ನೋಡುತ್ತಿದ್ದಾಗ, ಒಂದು ಪುಟ ಓದಿ ಹೇಳಲು ಕೇಳಿದೆ. ಕಥೆಯನ್ನು ಸರಿಯಾಗಿಯೇ ಹೇಳಿದಳು, ಆದರೆ ಪಠ್ಯವನ್ನು ನೋಡಲಿಲ್ಲ ಹಾಗೂ ಪದಗಳ ಮೇಲೆ ಬೆರಳಿಡಲಿಲ್ಲ. ಆವಳನ್ನು ಹುರಿದುಂಬಿಸಿ, ಚಿತ್ರಗಳನ್ನು ಮುಚ್ಚಿ ಕಥೆಯನ್ನು ಪುನಃ ಹೇಳಲು ಕೇಳೀದೆ. ಅವಳಿಗೆ ಮಾರ್ಗದರ್ಶಿಯಾಗಿ ಚಿತ್ರಗಳು ಇಲ್ಲದಿದ್ದುದರಿಂದ, ಈ ಸಲ ಓದಲು ಕಷ್ಟಪಟ್ಟಳು. ಚಿತ್ರಗಳನ್ನು ತೋರಿಸಿದ ತಕ್ಷಣ ಕಥೆ ಮುಂದುವರಿಸುತ್ತಿದ್ದಳು. ಅವಳು ಕಥೆಯನ್ನು ಜ್ಞಾಪಕದಲ್ಲಿ ಇಟ್ಟುಕೊಂಡಿದ್ದಳು, ಅದರೆ ಓದಲು ಇನ್ನೂ ಕಲಿಯುತ್ತಿದ್ದಳು. ನಾನು ಆ ಕಥೆಯನ್ನು ಅವಳ ಜೊತೆ ಕೂತು, ಓದುವಾಗ ಪ್ರತೀ ಪದದ ಮೇಲೆ ಬೆರಳಿಟ್ಟು ಗಟ್ಟಿಯಾಗಿ ಓದಿದೆ. ಅವಳಿಗೆ ಚನ್ನಾಗಿಯೇ ತಿಳಿದಿದ್ದ ಕಥೆಗೂ ಮತ್ತು ಬರವಣಿಗೆಯಲ್ಲಿದ್ದ ಪಠ್ಯಕ್ಕೂ ಸಂಬಂಧವನ್ನು ಅವಳು ಕಲ್ಪಿಸಿಕೊಳ್ಳಬೇಕು ಎನ್ನುವ ಉದ್ದೇಶ ಸಾಧನೆಗೆ ಇದು ದಾರಿಯಾಯಿತು.

ಈ ಪ್ರಸಂಗ ಅಧ್ಯಯನದಲ್ಲಿ, ಸಾರಾ ರವರು ಅವರ ವಿದ್ಯಾರ್ಥಿಗಳು ಓದಿಗಾಗಿ ಬಳಸುತ್ತಿರುವ ನಿರ್ದಿಷ್ಟ ತಂತ್ರವನ್ನು ಗಮನಿಸಿ, ಅವರಲ್ಲಿ ಪ್ರತೀ ಒಬ್ಬರಿಗೂ ಮುಂದೆಹೋಗಲು ಅಗತ್ಯವಿದ್ದ ಬೆಂಬಲ ನೀಡಿದರು.

**ಚಿಂತನೆಗೊಂದು ಕ್ಷಣ**

- ನಿಮ್ಮಲ್ಲೂ ಸುರಭಿ, ಮಧು ಮತ್ತು ಪ್ರಮೀಳಾರಂಥ ವಿದ್ಯಾರ್ಥಿಗಳು ಇರುವರೇ?
- ನಿಮ್ಮ ತರಗತಿಯಲ್ಲಿ ಈ ಮೇಲಿನ ತಂತ್ರಗಳಲ್ಲದೆ ಬೇರೆಯದನ್ನು ಉಪಯೋಗಿಸುವ ವಿದ್ಯಾರ್ಥಿಗಳಿದ್ದಾರೆಯೆ?

ಓದಿಗೆ ಒಂದೇ ದಾರಿಯೇನೂ ಇಲ್ಲ. ಆದ್ದರಿಂದ, ವಿದ್ಯಾರ್ಥಿಗಳು ಈ ಸಂಕೀರ್ಣ ಕೌಶಲವನ್ನು ಅಭ್ಯಾಸ ಮಾಡುವ ಮತ್ತು ಪರಿಣತಿ ಪಡೆಯುವ ವಿವಿಧ ದಾರಿಗಳನ್ನು ಹುಡುಕಿಕೊಳ್ಳಲು ಶಿಕ್ಷಕರು ಉತ್ತೇಜಿಸಬೇಕು.

ಸಂಪನ್ಮೂಲ 3, ಪರಿವೀಕ್ಷಿಸಲು ಮತ್ತು ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡಲು ಕೆಲವು ವಿಚಾರಗಳನ್ನು ಮುಂದಿಡುತ್ತದೆ. ವಿದ್ಯಾರ್ಥಿಗಳಿಗೆ ನೀಡುವ ಹಿಮ್ಮಾಹಿತಿ, ಅವರ ಪ್ರಾರಂಭಿಕ ಓದಿಗೆ ಬೆಂಬಲ ಮತ್ತು ಪ್ರೋತ್ಸಾಹ ನೀಡಬಲ್ಲದು.

.

**Video: Monitoring and giving feedback**

## ಚಟುವಟಿಕೆ 4: ನಿಮ್ಮ ತರಗತಿಯಲ್ಲಿ ಓದನ್ನು ಗಮನಿಸುವುದು

ನಿಮ್ಮ ವಿದ್ಯಾರ್ಥಿಗಳಿಗೆ ಸೂಕ್ತ ಬೆಂಬಲ ನೀಡಲು, ಅವರು ಓದಿಗೆ ಯಾವ ರೀತಿಯ ತಂತ್ರ ಬಳಸುತ್ತಾರೆ ಎನ್ನುವುದನ್ನು ತಿಳಿಯುವುದು ಮುಖ್ಯ. ಕಲೆ ಹಾಕಿದ ಮಾಹಿತಿಯನ್ನು ಕ್ರೋಢಿಕರಿಸಲು ಪಟ್ಟಿ ತಯಾರಿಸಿದರೆ ಬಹಳ ಉಪಯುಕ್ತವಾಗುತ್ತದೆ. ಈ ಮಾಹಿತಿ, ಅವರ ಓದಿಗೆ ಯಾವ ರೀತಿಯ ಬೆಂಬಲ ಕೊಡಬಹುದೆನ್ನುವುದನ್ನು ಯೋಜಿಸಲು ಅನುಕೂಲ ಮಾಡಿಕೊಡುತ್ತದೆ. ಇದರ ಸ್ಯಾಂಪಲ್ ಅನ್ನು ಪಟ್ಟಿ 1 ರಲ್ಲಿ ಕೊಡಲಾಗಿದೆ.

ನೀವು ಒಬ್ಬರಾದ ಮೇಲೆ ಒಬ್ಬ ವಿದ್ಯಾರ್ಥಿಯನ್ನು ಗಮನಿಸಿತ್ತಿರುವಂತೆಯೇ ಅವರ ಹೆಸರನ್ನು ಅವರು ಬಳಸುತ್ತಿರುವ ಓದಿನ ತಂತ್ರದ ಕೆಳಗೆ ಬರೆಯಿರಿ. ಇದನ್ನು ಅಭ್ಯಾಸ ಮಾಡಲು ಪ್ರಸಂಗ ಅಧ್ಯಯನ 4 ರ ಸುರಭಿ, ಮಧು ಮತ್ತು ಪ್ರಮೀಳಾರ ಓದಿನ ತಂತ್ರವನ್ನು ಮೌಲ್ಯಾಂಕನ ಮಾಡುವುದು ಸಹಾಯಕವಾಗಬಹುದು. ಕಾಲಾನುಕ್ರಮದಲ್ಲಿ ತರಗತಿಯ ಎಲ್ಲ ವಿದ್ಯಾರ್ಥಿಗಳ ವಿವರಗಳನ್ನು ಈ ಪಟ್ಟಿಯಲ್ಲಿ ನಮೂದಿಸುವುದನ್ನು ಖಚಿತಪಡಿಸಿಕೊಳ್ಳಿ.

*ಪಟ್ಟಿ 1 ನಿಮ್ಮ ವಿದ್ಯಾರ್ಥಿಗಳ ಓದಿನ ತಂತ್ರಗಳನ್ನು ಗಮನಿಸುವುದು*

| ಊಹನೆಗಳು (Guesses) | ನೆನಪಿನಲ್ಲಿಟ್ಟುಕೊಳ್ಳುವುದು (Memorises) | ಮುಂದಾಗುವುದನ್ನು ಊಹಿಸಲು ಚಿತ್ರಗಳ ಬಳಕೆ | ಪದದ ಮೊದಲ ಅಕ್ಷರ ಬಳಸಿ ಊಹೆ | ಪ್ರತೀ ಪದವನ್ನು ಪ್ರತ್ಯೇಕವಾಗಿ ಓದುವುದು | ಪಠ್ಯದ ತುಣುಕುಗಳ /ವಾಕ್ಯಾಂಶಗಳ ಓದುವಿಕೆ | ಪದ ಓದುವಾಗ ತೋರಿಸುವುದು | ವಾಕ್ಯದ ಕೆಳಗೆ ಬೆರಳನ್ನು ಚಲಿಸುವುದು |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |

ಕೆಲವು ವಿದ್ಯಾರ್ಥಿಗಳು ಈ ತಂತ್ರಗಳ ಮಿಶ್ರಣವನ್ನು ಬಳಸುತ್ತಿರುವರೇ?

ನಿಮ್ಮ ವಿದ್ಯಾರ್ಥಿಗಳು ಬೇರೆ ಯಾವುದಾದರೂ ತಂತ್ರವನ್ನು ಬಳಸುತ್ತಿದ್ದರೆ, ಅದನ್ನು ಈ ಪಟ್ಟಿಯಲ್ಲಿ ಸೇರಿಸಿ.

ಒಂದೇ ರೀತಿಯ ತಂತ್ರಗಳನ್ನು ಬಳಸುತ್ತಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಅದಕ್ಕೆ ತಕ್ಕಂತೆ ಗುಂಪು ಮಾಡಿ. ಅವರ ವೈವಿಧ್ಯಮಯ ಅಗತ್ಯಗಳಿಗೆ ಕಾಲಾನುಕ್ರಮದಲ್ಲಿ ಸ್ಪಂದಿಸಲು ಸಾಧ್ಯವಾಗುವಂತೆ ನಿಮ್ಮ ಪಾಠಗಳನ್ನು ಯೋಜಿಸಿ, ಕೆಲವು ವಿದ್ಯಾರ್ಥಿಗಳಿಗೆ ನಿಮ್ಮಿಂದ ವೈಯಕ್ತಿಕ ಬೆಂಬಲದ ಆವಶ್ಯಕತೆ ಇರಬಹುದು.ಇನ್ನು ಕೆಲವರೊಡನೆ ಸಣ್ಣ ಗುಂಪುಗಳಲ್ಲಿ ಕೆಲಸ ಮಾಡಲು ಸಾಧ್ಯವಾಗಬಹುದು. ಬೇರೆ ಬೇರೆ ತಂತ್ರಗಳನ್ನು ಅಳವಡಿಸಿಕೊಂಡಿರುವ ವಿದ್ಯಾರ್ಥಿಗಳನ್ನು ಜೋಡಿ ಮಾಡಿ ಅವರು ಪರಸ್ಪರರಿಂದ ಕಲಿಯುತ್ತಿದ್ದಾರೆಯೇ ಎಂದು ನೋಡಬಹುದು. ಈ ಪಟ್ಟಿಯನ್ನು ನಕಲು ಮಾಡಿಟ್ಟುಕೊಂಡು ಇಡೀ ವರ್ಷ ನಿಮ್ಮ ವಿದ್ಯಾರ್ಥಿಗಳ ಓದಿನ ಪ್ರಗತಿಯನ್ನು ದಾಖಲಿಸಲು ಬಳಸಬಹುದು.

'Assessing progress and performance'ಎನ್ನುವ ಮುಖ್ಯ ಸಂಪನ್ಮೂಲವನ್ನು ಓದುವುದು ನಿಮಗೆ ಸಹಾಯಕಾರಿಯಾಗಬಹುದು

**Video: Assessing progress and performance**

## 4 ಸಾರಾಂಶ

ಪ್ರಾರಂಭಿಕ ಸಾಕ್ಷರತೆಯನ್ನು ಬೋಧಿಸುವುದು ಅಂತರಕ್ರಿಯಾತ್ಮಕವಾದ, ತೊಡಗಿಸಿಕೊಳ್ಳುವ ಆನಂದದಾಯಕ ಪ್ರಕ್ರಿಯೆಯಾಗಿರಬೇಕು. ಕಥೆ ಹೇಳುವುದಾಗಲೀ ಅಥವಾ ಗಟ್ಟಿಯಾಗಿ ಓದುವುದಾಗಲೀ, ಏನೇ ಮಾಡಿದರೂ ಮಕ್ಕಳಿಗೆ ಅದು ವಾಕ್ಯಾಂಶಗಳನ್ನು ಪುನರುಚ್ಚಾರ

ಮಾಡಲು, ಆಂಗಿಕ ಅಭಿವ್ಯಕ್ತಿಗೆ, ಮುಂದೇನಾಗುತ್ತೆಂದು ಊಹಿಸಲು, ಕತೆಯನ್ನು ನೆನಪಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಿಸಿದ ನಾಟಕ ಅಥವಾ ಕಲಾ ಚಟುವಟಕೆಗಳನ್ನು ಮಾಡಲು ಅವಕಾಶ ನೀಡಬೇಕು.

ಚಿಕ್ಕ ಮಕ್ಕಳಿಗೆ ಅನೇಕ ದೀರ್ಘಾವಧಿ ಓದಿನ ಸಮಯಗಳಿಗಿಂತ ಪ್ರತೀ ದಿನ ಒಂದು ಅಲ್ಪಾವಧಿಯ ಓದಿನ ಸಮಯ ಉತ್ತಮ.

ವಿದ್ಯಾರ್ಥಿಗಳ  ಓದಿಗೆ ಮತ್ತು ಪುಸ್ತಕ ಬಳಕೆಗೆ ಒಳ್ಳೆಯ ಮಾದರಿಗಳನ್ನು ಪದೇ ಪದೇ ನೋಡುತ್ತಿದ್ದರೆ, ಅವರೂ ಸ್ವತಃ ಓದುವುದಕ್ಕೆ ಪ್ರಯತ್ನಿಸುತ್ತಾರೆ

ಓದುಗರಾಗಲು ಅನೇಕ ದಾರಿಗಳಿವೆ.  ಆನಂದದಾಯಕ ಚಟುವಟಿಕೆಗಳ , ಅಭ್ಯಾಸ ಮತ್ತು ಬೆಂಬಲದ ಮೂಲಕ ನಿಮ್ಮ ವಿದ್ಯಾರ್ಥಿಗಳ ಆತ್ಮವಿಶ್ವಾಸ ಉಳ್ಳ ಸರಾಗ ಓದುಗರಾಗಬಲ್ಲರು.  ತನ್ಮೂಲಕ ಅವರ ಕಲಿಕೆಯ ಭವಿಷ್ಯಕ್ಕೆ ಒಳ್ಳೆಯ ಅಡಿಪಾಯ ದೊರಕುತ್ತದೆ.

## ಸಂಪನ್ಮೂಲಗಳು

### ಸಂಪನ್ಮೂಲ 1: 'ಬಸ್ಸಿನೊಳಗೆ ಹೋದ ಡಬ್ಬಗಳು'

ಬಸ್ಸು ನಿಲ್ದಾಣಕ್ಕೆ ಬಂದು ನಿಂತಿತ್ತು.  ವಯಸ್ಸಾದವರೊಬ್ಬರು ಬಸ್ ಹತ್ತಿದರು.  ಅವರು ಒಂದು ಕಂದು ಬಣ್ಣದ ಡಬ್ಬ ತಂದಿದ್ದರು.  ಆ ಡಬ್ಬದ್ದಲ್ಲಿ …………………. (ಟೋಪಿ) ಇತ್ತು.  ನಂತರ ತಾಯಿ ತನ್ನ ಮಗುವಿನ ಜೊತೆ ಬಸ್ ಹತ್ತಿದ್ದರು.  ಅವರ ಬಳಿ ಒಂದು ಸಣ್ಣ ಬಿಳಿ ಡಬ್ಬವಿತ್ತು.  ಡಬ್ಬದಲ್ಲಿ ಒಂದು _____________ (ಬಳೆ) ಇತ್ತು.  ಆಮೇಲೆ ಒಬ್ಬ ಬಡಗಿ ಬಸ್ ಹತ್ತಿದಳು.  ಅವಳ ಬಳಿ ಅತೀ ಉದ್ದನೆ ಮರದ ಡಬ್ಬವಿತ್ತು.  ಆ ಡಬ್ಬದಲ್ಲಿ ……………….. (ಒಂದು ಕೊಡಲಿ) ಇತ್ತು.  ನಂತರ ಒಬ್ಬ ಅಡುಗೆಯವನು ಬಸ್ ಹತ್ತಿದ.  ಅವನ ಬಳಿ ಗುಂಡಗಿರುವ ಡಬ್ಬವಿತ್ತು.  ಆ ಡಬ್ಬದಲ್ಲಿ ………………….. (ರೊಟ್ಟಿ) ಇತ್ತು.

ಈ ಕತೆಯನ್ನು ಎಷ್ಟು ಬೇಕಾದರೂ ಬೆಳೆಸಬಹುದು.  ಬಸ್ ತುಂಬಿದಾಗ ಚಾಲಕ, 'ಇನ್ಯಾರನ್ನೂ ಅಥವಾ ಡಬ್ಬಗಳನ್ನೂ ಹತ್ತಿಸಕ್ಕೆ ಆಗಲ್ಲ.  ಬಾಗಿಲು ಮುಚ್ಚುತ್ತಾ ಇದೆ.  ಬೀಪ್ ಬೀಪ್' ಎಂದು ಹೇಳುತ್ತಾನೆ

ಈ ಕಥೆಯಲ್ಲಿ ಡಬ್ಬದ ಆಕಾರ, ಬಣ್ಣ ಮತ್ತು ಅದು ಯಾವುದರಿಂದ ಮಾಡಲ್ಪಟ್ಟಿದೆ ಎನ್ನುವುದನ್ನು ಹೇಳಿ ಕಥೆಯನ್ನು ಸ್ವಲ್ಪ ಸಂಕೀರ್ಣಗೊಳಿಸಬಹುದು.  ಡಬ್ಬದೊಳಗಿರುವ ಸಾಮಾನಿಗೂ ಕೆಲವು ಗುಣವಾಚಕಗಳನ್ನು ಸೇರಿಸಿ ಅದರಲ್ಲಿ ಎಣಿಸಬಹುದಾದ, ಎಣಿಸಲಾಗದ ವಸ್ತುಗಳನ್ನು ತುಂಬಬಹುದು (ಉದಾಹರಣೆಗೆ, 'ಅವನು ಭಾರವಾದ ಲೋಹದ ಡಬ್ಬ ತಂದಿದ್ದ.  ಅದರಲ್ಲಿ ಒಂದು ಜೊತೆ ಹಳೇ ಚಪ್ಪಲಿ, ಸ್ವಲ್ಪ ಹಿಟ್ಟು , ಮೂರು ದಪ್ಪನಾದ ಕೋಳಿಗಳಿದ್ದವು) ಅಥವಾ ಡಬ್ಬದಿಂದ ಬರುವ ಶಬ್ದವನ್ನು ಸೇರಿಸಬಹುದು (ಉದಾಹರಣೆಗೆ, 'ಅವಳು ಸಣ್ಣ ಡಬ್ಬ ತಂದಿದ್ದಳು.  ಅದರಿಂದ ಕುಯ್ ಕುಯ್ ಶಬ್ದ ಬರುತ್ತಿತ್ತು').  ಇದೇ ಕಥೆಯ ಮೂಲಕ ಜನರ ಉದ್ಯೋಗ ಮತ್ತು ಅವರ ಕೆಲಸದಲ್ಲಿ ಅವರು ಬಳಸುವ ಸಲಕರಣೆಗಳನ್ನು ಪರಿಚಯಿಸಬಹುದು.

ಡಬ್ಬ ಮತ್ತು ಅದರಲ್ಲಿರುವ ಸಾಮಾನುಗಳ ಪಟ್ಟಿ ದೊಡ್ಡದಾಗುತ್ತಿದ್ದಂತೆಯೇ ಕಥೆ, ನೆನಪಿನ ಆಟವಾಗಿ ಮಾರ್ಪಾಡಾಗುತ್ತದೆ.

### ಸಂಪನ್ಮೂಲ 2: ಗಟ್ಟಿ ಓದಿನ ಅವಧಿಯ ಯೋಜನೆ

ತಯಾರಿ:

- ಗಟ್ಟಿಯಾಗಿ ಓದಲು ಸರಳವಾದ ಒಂದು ಕಥೆಯನ್ನು ಆಯ್ಕೆ ಮಾಡಿಕೊಳ್ಳಿ.  ಎಲ್ಲ ವಿದ್ಯಾರ್ಥಿಗಳಿಗೂ ಪುಸ್ತಕದಲ್ಲಿರುವ ಪದ ಮತ್ತು ಚಿತ್ರಗಳು ಕಾಣಿಸುವಷ್ಟು ದೊಡ್ಡದಾಗಿರಬೇಕು.
- ಕಥೆ ನಿಮಗೆ ಮುಂಚಿತವಾಗಿಯೇ ತಿಳಿದಿರಲಿ
- ಹಾವಭಾವಗಳೊಂದಿಗೆ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಕಾಣಿಸುವಂತೆ ಹಿಡಿದುಕೊಂಡು ಓದುವುದನ್ನು ಮನೆಯವರ ಮುಂದೆ ಅಥವಾ ಸಹೋದ್ಯೋಗಿಯೊಂದಿಗೆ ಅಭ್ಯಾಸ ಮಾಡಿಕೊಳ್ಳಿ

ಪ್ರಾರಂಭಿಕ ಓದುವಿಕೆ

- ಮಕ್ಕಳಿಗೆ ಪರಿಚಯವಿಲ್ಲದ ಪದಗಳು ಅಥವಾ ಪರಿಕಲ್ಪನೆಗಳು ಇದ್ದರೆ, ಅವನ್ನು ಗುರುತಿಸಿಕೊಳ್ಳಿ. ನೆನಪಿರಲಿ - ಕೆಲವು ಮಕ್ಕಳಿಗೆ ಶಾಲೆಯ ಭಾಷೆಯಲ್ಲಿ ಹಿಂಜರಿಕೆ ಇರಬಹುದು

ಕಥೆ ಓದುವ ಮುನ್ನ

- ಮಕ್ಕಳೆಲ್ಲರಿಗೂ ಪುಸ್ತಕ ಕಾಣುವಂತೆ ನಿಮ್ಮ ಸುತ್ತ ಕೂಡಿಸಿಕೊಳ್ಳಿ.
- ಕಥೆಯ ವಸ್ತುವಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಅನುಭವಕ್ಕೆ ಬಂದಿರಬಹುದಾದ ವಿಷಯ ಕುರಿತು ಮಾತನಾಡಿ.
- ಕಥೆಯಲ್ಲಿ ಯಾವುದಾದರೂ ಮುಖ್ಯ ಪದಗಳಿದ್ದು, ಆ ಪದಗಳು ಮಕ್ಕಳಿಗೆ ಅಪರಿಚಿತವಾಗಿರುವ ಸಾಧ್ಯತೆ ಇದ್ದರೆ, ಆ ಪದಗಳನ್ನು ಪರಿಚಯಿಸಿ,ಅವುಗಳ ಅರ್ಥ ತಿಳಿಸಿ. ಶಾಲೆ ಭಾಷೆ ಮನೆ ಭಾಷೆ ಬೇರೆ ಬೇರೆ ಇರುವ ಮಕ್ಕಳಿಗಂತೂ ಇದು ಮಹತ್ವಪೂರ್ಣವಾದದ್ದು.
- ಪುಸ್ತಕದ ಮುಖಪುಟವನ್ನು ತೋರಿಸಿ, ಪುಸ್ತಕವನ್ನು ಪರಿಚಯಿಸಿ. ಶೀರ್ಷಿಕೆಯ ಕಡೆ ತೋರಿಸಿ, ಅದನ್ನು ಓದಿ. ಮುಖಪುಟದ ಮೇಲಿನ ಚಿತ್ರ ಕುರಿತು ಮಾತನಾಡಿ. ಅದನ್ನು ನೋಡಿ, ವಿದ್ಯಾರ್ಥಿಗಳು ಕಥೆ ಯಾವುದರ ಕುರಿತಾಗಿದೆ ಎಂದು ಊಹಿಸಲು ಹೇಳಿ.

## ಪರಿಣಾಮಕಾರಿಯಾಗಿ ಕಥೆ ಓದುವುದು

- ಕಥೆಯನ್ನು ಭಾವಪೂರ್ಣವಾಗಿ, ಪ್ರತೀ ಪಾತ್ರಕ್ಕೂ ವಿಭಿನ್ನ ಧ್ವನಿ ಬಳಸಿ ಪಠ್ಯವನ್ನು ಓದಿ
- ವಾಕ್ಯಗಳನ್ನು ಓದುವಾಗ ಆಯಾ ಪದದ ಕೆಳಗೆ ಬೆರಳನ್ನು ಚಲಿಸುತ್ತಾ ಓದಿ.
- ಜೊತೆಗಿರುವ ಚಿತ್ರಗಳಲ್ಲಿ ನಡೆಯುತ್ತಿರುವುದನ್ನು ವಿವರಿಸುವಂತೆ ನಿಮ್ಮ ವಿದ್ಯಾರ್ಥಿಗಳಿಗೆ ಹೇಳಿ
  - ಚಿತ್ರದಲ್ಲಿ ನಿನಗೇನು ಕಾಣಿಸುತ್ತಿದೆ?
  - ಅಲ್ಲಿ ಏನು ನಡೆಯುತ್ತಿದೆ ಎಂದು ನಿನಗನ್ನಿಸುತ್ತಿದೆ?
- ಸೂಕ್ತವಾದೆಡೆ,ಪುಟ ತಿರುಗಿಸುವ ಮೊದಲು,ಮುಂದೇನಾಗುತ್ತದೆ ಎಂದು ಊಹಿಸಲು ನಿಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಕೊಡಿ. ಅವರಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಬಹುದು:
  - ಮುಂದೇನಾಗೊತ್ತೋಪ್ಪಾ?
  - ಅವನು ಈಗ ಏನ್ಹೇಳಬಹುದು ಅಂತ ನಿಂಗನ್ನಿಸುತ್ತೆ?

## ಕಥೆ ಓದಿದ ನಂತರ

ಕಥೆಯ ಬಗ್ಗೆ ಮಾತನಾಡಿ. ವಿದ್ಯಾರ್ಥಿಗಳನ್ನು ಈ ರೀತಿಯ ಪ್ರಶ್ನೆ ಕೇಳಿ:

- 'ನಿನಗೆ ಯಾವ ಭಾಗ ತುಂಬಾ ಇಷ್ಟ ಯಿತು?'
- 'ನಿನಗೆ ಪ್ರಿಯವಾದ ಪಾತ್ರ ಯಾವುದು? ಏಕೆ?'

ಚಿಕ್ಕ ಮಕ್ಕಳಿಂದ ವಿವರವಾದ ಉತ್ತರಗಳನ್ನು ನಿರೀಕ್ಷಿಸಲೇಬೇಡಿ. ಚರ್ಚೆ ಸಂತೋಷಕರವಾಗಿರಲಿ. ಓದಿನ ಪ್ರಕ್ರಿಯೆ ಮತ್ತು ಆನಂದ ಎರಡಕ್ಕೂ ಮಾದರಿಯಾಗಿರಿ. ನಿಮ್ಮ ಅನಿಸಿಕೆಗಳನ್ನು ಅಭಿವ್ಯಕ್ತಿಸಲು ಮರೆಯಬೇಡಿ.

## ಮೌಲ್ಯಾಂಕನದ ಅವಕಾಶಗಳು

- ನೀವು ಓದಿದ ಕಥೆಗೆ ನಿಮ್ಮ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸಿದರು?
- ಕೆಲವರಿಗೆ ಅರ್ಥವಾಗದಂತೆ ತೋರಿತೇ? ಹಾಗಿದ್ದಲ್ಲಿ, ಕಾರಣವೇನಿರಬಹುದು?
- ಅವರಲ್ಲಿ ಯಾರಾದರೂ ಕಥೆಯ ಮುಖ್ಯ ಪದಗಳನ್ನು ಅಥವಾ ಅಭಿವ್ಯಕ್ತಿಗಳನ್ನು ನಂತರ ಬಳಸಿದರೇ?
- ಯಾವ ವಿದ್ಯಾರ್ಥಿಯಾದರೂ ತನಗೆ ಸಿಕ್ಕ ಸಮಯದಲ್ಲಿ, ನಿಮ್ಮ ಓದುವ ನಡವಳಿಕೆಯನ್ನು ಮಾದರಿಯಾಗಿಸಿಕೊಂಡು ತಂತಾನೇ ಪುಸ್ತಕ ಎತ್ತಿಕೊಂಡು, ಅದನ್ನು ಸ್ವಂತವಾಗಿ ನೋಡುತ್ತಿರುವುದನ್ನು ಗಮನಿಸಿರುವಿರಾ?

# ಸಂಪನ್ಮೂಲ 3: ಪರಿವೀಕ್ಷಣೆ ಮತ್ತು ಹಿಮ್ಮಾಹಿತಿ ನೀಡುವುದು

ನಿರಂತರವಾಗಿ ಪರಿವೀಕ್ಷಿಸಿ ವಿದ್ಯಾರ್ಥಿಗಳಿಗೆ ಪ್ರತಿಕ್ರಿಯಿಸುವುದರ ಮೂಲಕ ವಿದ್ಯಾರ್ಥಿಗಳ ಕಾರ್ಯ ನಿರ್ವಹಣೆಯನ್ನು (performance) ಉತ್ತಮಪಡಿಸಬಹುದಾಗಿದೆ. ಇದರಿಂದ ಅವರಿಗೆ, ಅವರಿಂದ ಏನು ನಿರೀಕ್ಷಿಸಲಾಗುತ್ತಿದೆ ಎಂಬುದು ತಿಳಿಯುತ್ತದೆ. ನಂತರ ಕಾರ್ಯ ಪೂರ್ಣಗೊಂಡ ನಂತರ ಅವರಿಗೆ ಹಿಮ್ಮಾಹಿತಿಯೂ ದೊರಕುತ್ತದೆ. ನೀವು ಕೊಡುವ ರಚನಾತ್ಮಕ ಹಿಮ್ಮಾಹಿತಿಯಿಂದ, ವಿದ್ಯಾರ್ಥಿಗಳು ಅವರ ಕಾರ್ಯ ನಿರ್ವಹಣೆ ಯನ್ನು (performance) ಉತ್ತಮಪಡಿಸಿಕೊಳ್ಳಬಹುದು.

**ಪರಿವೀಕ್ಷಣೆ**: ಪರಿಣಾಮಕಾರೀ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಯಾವಾಗಲೂ ಗಮನಿಸುತ್ತಲೇ ಇರುತ್ತಾರೆ. ಸಾಮಾನ್ಯವಾಗಿ ಬಹುಪಾಲು ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ತರಗತಿಯಲ್ಲಿ ಮಾಡಿದ ಕೆಲಸಗಳನ್ನು ಗಮನಿಸಿ ಹಾಗೂ ಅವರು ಹೇಳುವುದನ್ನು ಕೇಳಿಸಿಕೊಳ್ಳುವ ಮೂಲಕ ಪರಿವೀಕ್ಷಣಾ ಕಾರ್ಯ ಮಾಡುತ್ತಾರೆ. ವಿದ್ಯಾರ್ಥಿಗಳ ಪ್ರಗತಿಯನ್ನು ಪರಿವೀಕ್ಷಿಸುವುದು ತುಂಬಾ ಮಹತ್ವದ ಕೆಲಸ ಏಕೆಂದರೆ ಇದು ಅವರಿಗೆ:

- ಉತ್ತಮ ಗ್ರೇಡ್ ಗಳನ್ನು ಪಡೆಯಲು ಸಹಾಯ ಮಾಡುತ್ತದೆ.
- ಅವರ ಕಾರ್ಯ ನಿರ್ವಹಣೆಯ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸಿಕೊಳ್ಳಲು ಮತ್ತು ತಮ್ಮ ಕಲಿಕೆಯ ಬಗ್ಗೆ ಹೆಚ್ಚಿನ ಜವಾಬ್ದಾರಿ ಹೊಂದಲು ಸಹಾಯ ಮಾಡುತ್ತದೆ.
- ಅವರ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಸಹಾಯ ಮಾಡುತ್ತದೆ
- ರಾಜ್ಯ ಹಾಗೂ ಸ್ಥಳೀಯ ಪ್ರಮಾಣೀಕರಿಸಿದ ಪರೀಕ್ಷೆಗಳ ಮೂಲಕ ತಮ್ಮ ಸಾಧನೆ ಯಾವ ಮಟ್ಟದಿರಬಹುದೆಂದು ಊಹಿಸಲು ಸಹಾಯ ಮಾಡುತ್ತದೆ.

ಒಬ್ಬ ಶಿಕ್ಷಕರಾಗಿ ನಿರ್ಧಾರವನ್ನು ತೆಗೆದುಕೊಳ್ಳಲೂ ಸಹ ಇದು ಸಹಾಯ ಮಾಡುತ್ತದೆ

- ಪ್ರಶ್ನೆಯನ್ನು ಯಾವಾಗ ಕೇಳಬೇಕು ಅಥವಾ ಸುಳಿವನ್ನು ಯಾವಾಗ ಕೊಡಬೇಕು
- ಯಾವಾಗ ಹೊಗಳಬೇಕು
- ಅವರಿಗೆ ಸವಾಲನ್ನೊಡ್ಡಬಹುದೇ
- ವಿವಿಧ ಗುಂಪುಗಳ ವಿದ್ಯಾರ್ಥಿಗಳನ್ನು ಒಂದು ಕಾರ್ಯದಲ್ಲಿ ತೊಡಗಿಸುವ ರೀತಿ
- ತಪ್ಪುಗಳ ಬಗ್ಗೆ ಏನು ಮಾಡುವುದು

ವಿದ್ಯಾರ್ಥಿಗಳಿಗೆ ಅವರ ಪ್ರಗತಿಯ ಬಗ್ಗೆ ಸ್ಪಷ್ಟವಾದ ಮತ್ತು ನಿಖರವಾದ ಹಿಮ್ಮಾಹಿತಿ ನೀಡಿದಾಗ, ವಿದ್ಯಾರ್ಥಿಗಳು ತಮ್ಮನ್ನು ಇನ್ನೂ ಹೆಚ್ಚು ಉತ್ತಮಪಡಿಸಿಕೊಳ್ಳುತ್ತಾರೆ. ಪರಿವೀಕ್ಷಣೆಯಿಂದ ನೀವು ನಿಮ್ಮ ವಿದ್ಯಾರ್ಥಿಗಳಿಗೆ ನಿರಂತರ ಹಿಮ್ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತದೆ, ಆಗ ನಿಮ್ಮ ವಿದ್ಯಾರ್ಥಿಗಳಿಗೆ ಅವರು ಹೇಗೆ ಕಲಿಯುತ್ತಿದ್ದಾರೆ ಮತ್ತು ತಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಬೇರೆ ಏನನ್ನು ಕಲಿಯುವ ಅವಶ್ಯಕತೆ ಇದೆ ಎಂಬುದರ ಬಗ್ಗೆ ಅರಿವುಂಟಾಗುತ್ತದೆ.

ನಿಮಗೆ ಎದುರಾಗುವ ಒಂದು ಸವಾಲೆಂದರೆ ನೀವು ನಿಮ್ಮ ವಿದ್ಯಾರ್ಥಿಗಳಿಗೆ ಅವರದ್ದೇ ಆದ ಕಲಿಕಾ ಗುರಿಗಳನ್ನು ನಿರ್ದಿಷ್ಟ ಪಡಿಸಿಕೊಳ್ಳಲು ಸಹಾಯ ಮಾಡುವುದು, ಇದನ್ನು ಸ್ವ-ಪರಿವೀಕ್ಷಣೆ ಎಂದೂ ಕರೆಯಬಹುದು. ವಿದ್ಯಾರ್ಥಿಗಳು, ವಿಶೇಷವಾಗಿ, ಕಲಿಕೆ ಕಷ್ಟ ಎಂದು ಭಾವಿಸುವವರಿಗೆ, ಕಲಿಕೆ ಆಪ್ತವಾದದ್ದು, ತಮ್ಮ ಸ್ವಂತದ್ದು ಅನ್ನಿಸುವುದೇ ಇಲ್ಲ.

ನೀವು ಯಾವುದೇ ವಿದ್ಯಾರ್ಥಿ ಒಂದು ಕಾರ್ಯ ಯೋಜನೆಗೆ ತನ್ನದೇ ಆದ ಸ್ಪಷ್ಟ ಗುರಿಗಳನ್ನು ಹಾಕಿಕೊಂಡು, ಅದರ ಯೋಜನೆಯನ್ನು ತಯಾರಿಸಿ, ಅದಕ್ಕೆ ಬೇಕಾಗುವ ಸಮಯವನ್ನು ನಿರ್ದಿಷ್ಟ ಮಾಡಿಕೊಂಡು, ತನ್ನ ಪ್ರಗತಿಯನ್ನು ತಾನೇ ಸ್ವತಃ ಪರೀವಿಕ್ಷಿಸಿ ಪರೀಕ್ಷಿಸಿಕೊಳ್ಳಲು ಸಹಾಯ ಮಾಡಬಹುದು. ಈ ಪ್ರಕ್ರಿಯೆಯನ್ನು ಅಭ್ಯಾಸ ಮಾಡುವುದರಿಂದ, ಅವರು ತಮ್ಮನ್ನು ತಾವು ಸ್ವತಃ ಮೌಲ್ಯಾಂಕನ ಮಾಡಿಕೊಳ್ಳುವುದರಲ್ಲಿ ಪ್ರಭುತ್ವವನ್ನು ಗಳಿಸುತ್ತಾರೆ. ಇದು ಅವರಿಗೆ ಶಾಲೆಯಲ್ಲಿ ಹಾಗೂ ಒಟ್ಟಾರೆ ಜೀವನದಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಸಹಾಯ ಮಾಡುತ್ತದೆ.

**ವಿದ್ಯಾರ್ಥಿಗಳು ಹೇಳಿದ್ದನ್ನು ಆಲಿಸುವುದು ಮತ್ತು ವೀಕ್ಷಿಸುವುದು**

ಶಿಕ್ಷಕರು ಸಹಜವಾಗಿಯೇ ಹೆಚ್ಚು ಕಡಿಮೆ ಸದಾಕಾಲವೂ ವಿದ್ಯಾರ್ಥಿಗಳು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿರುತ್ತಾರೆ ಮತ್ತು ಅವರನ್ನು ಗಮನಿಸುತ್ತಿರುತ್ತಾರೆ. ಇದು ಒಂದು ಸರಳ ಪರಿವೀಕ್ಷಣಾ ಸಾಧನ. ಉದಾಹರಣೆಗೆ ನೀವು:

- ನಿಮ್ಮ ವಿದ್ಯಾರ್ಥಿಗಳು ಗಟ್ಟಿಯಾಗಿ ಓದುವುದನ್ನು ಆಲಿಸುತ್ತಿರಬಹುದು
- ಗುಂಪು ಕೆಲಸ ಅಥವಾ ಜೋಡಿಯಾಗಿ ಕಾರ್ಯ ನಿರ್ವಹಿಸುವಾಗ ಆಗುವ ಚರ್ಚೆಗಳನ್ನು ಆಲಿಸುತ್ತಿರಬಹುದು
- ತರಗತಿ ಕೋಣೆಯ ಒಳಗೆ ಅಥವಾ ಹೊರಗೆ, ವಿದ್ಯಾರ್ಥಿಗಳು ಬಳಸುವ ಸಂಪನ್ಮೂಲಗಳನ್ನು ವೀಕ್ಷಿಸಿರಬಹುದು
- ಗುಂಪಿನಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಅವರ ಆಂಗಿಕ ಭಾಷೆಯನ್ನು ವೀಕ್ಷಿಸಿರಬಹುದು

ನೀವು ಸಂಗ್ರಹಿಸಿದ ವೀಕ್ಷಣೆಗಳು, ವಿದ್ಯಾರ್ಥಿಯ ಪ್ರಗತಿ ಅಥವಾ ಕಲಿಕೆಗೆ ನಿಜವಾದ ಪುರಾವೆಯನ್ನು ಒದಗಿಸುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಿ. ವಿದ್ಯಾರ್ಥಿಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವಾಗ ನೀವು ನೋಡಿದ, ಕೇಳಿದ, ಸಮರ್ಥಿಸಿಕೊಳ್ಳಬಹುದಾದ, ಲೆಕ್ಕವಿಡಬಹುದಾದ ವಿಷಯಗಳನ್ನು ಮಾತ್ರ ದಾಖಲಿಸಿಕೊಳ್ಳಿ.

ವಿದ್ಯಾರ್ಥಿಗಳು ಕಾರ್ಯ ನಿರ್ವಹಿಸುತ್ತಿರುವಾಗ, ನೀವು ತರಗತಿ ಕೋಣೆಯಲ್ಲಿ ಓಡಾಡುತ್ತಾ, ಸಂಕ್ಷಿಪ್ತವಾಗಿ ವೀಕ್ಷಣಾ ಟಿಪ್ಪಣಿಗಳನ್ನು ಬರೆದುಕೊಳ್ಳಬಹುದು. ತರಗತಿಯಲ್ಲಿರುವ ವಿದ್ಯಾರ್ಥಿಗಳ ಹೆಸರಿನ ಪಟ್ಟಿಯಲ್ಲಿ ಯಾವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯದ ಅವಶ್ಯಕತೆಯಿದೆ ಎಂದು ದಾಖಲಿಸಿಕೊಳ್ಳಬಹುದು ಮತ್ತು ಯಾವುದಾದರೂ ತಪ್ಪು ಗ್ರಹಿಕೆಗಳಿದ್ದರೆ ಅದರ ಬಗ್ಗೆಯೂ ಟಿಪ್ಪಣಿಯನ್ನು ಮಾಡಿಕೊಳ್ಳಬಹುದು. ಈ ವೀಕ್ಷಣಾ ಟಿಪ್ಪಣಿಗಳ ಆಧಾರದ ಮೇರೆಗೆ ಇಡೀ ತರಗತಿಗೆ ಹಿಮ್ಮಾಹಿತಿಯನ್ನು ನೀಡಬಹುದು ಅಥವಾ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಅಥವಾ ಗುಂಪುಗಳಲ್ಲಿ ಸುಳಿವು ಸೂಚನೆ ನೀಡಿ ಪ್ರೋತ್ಸಾಹಿಸಬಹುದು.

**ಹಿಮ್ಮಾಹಿತಿ ನೀಡುವುದು**

ನಿರೀಕ್ಷಿತ ಕಲಿಕಾಫಲ ಅಥವಾ ಉದ್ದೇಶಿತ ಗುರಿ ಸಾಧನೆಯಲ್ಲಿ ವಿದ್ಯಾರ್ಥಿಗಳು ಹೇಗೆ ಕಾರ್ಯ ನಿರ್ವಹಿಸಿದರು ಎಂಬುದರ ಕುರಿತ ಮಾಹಿತಿ, ಹಿಮ್ಮಾಹಿತಿಯ ಮೂಲಕ ದೊರಕುತ್ತದೆ. ಪರಿಣಾಮಕಾರಿ ಹಿಮ್ಮಾಹಿತಿಯು ವಿದ್ಯಾರ್ಥಿಗೆ ಕೆಳಗಿನ ಅಂಶಗಳನ್ನು ಒದಗಿಸುತ್ತದೆ:

- ಆಗಿರುವ ಕಾರ್ಯದ ಬಗ್ಗೆ ಮಾಹಿತಿ
- ಒಂದು ಕ್ರಿಯೆ ಅಥವಾ ಕಾರ್ಯ ಎಷ್ಟು ಚೆನ್ನಾಗಿ ಮಾಡಲ್ಪಟ್ಟಿದೆ ಎಂಬುದರ ಮೌಲ್ಯಮಾಪನ
- ಅವರ ಕಾರ್ಯ ನಿರ್ವಹಣೆಯನ್ನು ಉತ್ತಮಪಡಿಸುವುದಕ್ಕೆ ಮಾರ್ಗದರ್ಶನ

ನೀವು ಪ್ರತಿ ವಿದ್ಯಾರ್ಥಿಗೆ ಹಿಮ್ಮಾಹಿತಿ ನೀಡಿದಾಗ, ಅದು ಈ ಕೆಳಗಿನವುಗಳನ್ನು ತಿಳಿಯುವುದಕ್ಕೆ ನೆರವಾಗುತ್ತದೆ

- ಅವರು ಏನನ್ನು ಮಾಡಬಲ್ಲರು
- ಅವರು ಈಗ ಸಧ್ಯಕ್ಕೆ ಏನನ್ನು ಮಾಡಲಾರರು
- ಅವರ ಕಾರ್ಯವನ್ನು ಇತರರ ಕಾರ್ಯದೊಂದಿಗೆ ಹೋಲಿಸಿದಾಗ ಹೇಗೆ ಕಾಣಿಸುತ್ತಿದೆ
- ಅವರು ಹೇಗೆ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳಬಹುದು

ಪರಿಣಾಮಕಾರಿ ಹಿಮ್ಮಾಹಿತಿಯಿಂದ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ನಿಮ್ಮ ಹಿಮ್ಮಾಹಿತಿಯು ವಿದ್ಯಾರ್ಥಿಗೆ ಸರಿಯಾಗಿ ಅನ್ವಯಿಸದಿದ್ದರೆ ಅಥವಾ ಅಸ್ಪಷ್ಟತೆಯಿಂದ ಕೂಡಿದ್ದರೆ, ಇದು ಕಲಿಕೆಗೆ ಹಿನ್ನಡೆಯನ್ನುಂಟು ಮಾಡುತ್ತದೆ.

**ಪರಿಣಾಮಕಾರಿ ಹಿಮ್ಮಾಹಿತಿಯು:**

- ವಿದ್ಯಾರ್ಥಿ ಕೈಗೊಂಡ ಕಾರ್ಯ ಮತ್ತು ಅವರಿಗೆ ಆಗಬೇಕಾದ ಕಲಿಕೆಯನ್ನು **ಕೇಂದ್ರೀಕರಿಸಿರಬೇಕು**
- ವಿದ್ಯಾರ್ಥಿಗಳಿಗೆ, ಅವರ ಕಲಿಕೆಯಲ್ಲಿರುವ ಉತ್ತಮಾಂಶಗಳು ಯಾವುವು ಮತ್ತು ಇನ್ನೂ ಯಾವ ಅಂಶಗಳನ್ನು ಉತ್ತಮಪಡಿಸಿಕೊಳ್ಳಬೇಕು ಎಂಬುದನ್ನು **ಸ್ಪಷ್ಟವಾಗಿ ಮತ್ತು ಪ್ರಾಮಾಣಿಕವಾಗಿ** ಹೇಳಬೇಕು
- ವಿದ್ಯಾರ್ಥಿಗಳಿಗೆ ಅವರು **ಮಾಡಲು ಸಾಧ್ಯವಾ**ಗುವಂತಹ ಕೆಲಸಗಳನ್ನು ಸೂಚಿಸಬೇಕು
- ವಿದ್ಯಾರ್ಥಿಗಳಿಗೆ ಅರ್ಥವಾಗುವ **ಸೂಕ್ತ ಭಾಷೆ**ಯಲ್ಲಿರಬೇಕು
- **ಸರಿಯಾದ ಸಮಯ**ದಲ್ಲಿ ನೀಡಬೇಕು-ಬಹಳ ಮೊದಲೇ ಹೇಳಿದರೆ ವಿದ್ಯಾರ್ಥಿ "ನಾನು ಈಗ ಅದನ್ನೇ ಮಾಡಲು ಹೊರಟಿದ್ದೆ" ಎಂದು ಹೇಳಬಹುದು. ಬಹಳ ನಿಧಾನವಾಗಿ ಹೇಳಿದರೆ ವಿದ್ಯಾರ್ಥಿಯ ಯೋಚನಾ ಲಹರಿ ಬೇರೆಡೆಗೆ ಹರಿದು ಈ ವಿಷಯ ಅಪ್ರಸ್ತುತ ಎನ್ನಿಸಿ ನೀವು ಹೇಳಿದ ಕೆಲಸಕ್ಕೆ ಹಿಂದೆ ಹೋಗಲು ಮನಸ್ಸಾಗದಿರಬಹುದು.

ಹಿಮ್ಮಾಹಿತಿಯು ಮೌಖಿಕವಾಗಿದ್ದಿರಬಹುದು ಅಥವಾ ವಿದ್ಯಾರ್ಥಿಗಳ ವರ್ಕ್‌ಬುಕ್ಗಳಲ್ಲಿ ಬರವಣಿಗೆಯ ರೂಪದಲ್ಲಿರಬಹುದು. ಕೆಳಗಿನ ಮಾರ್ಗದರ್ಶನ ಅನುಸರಿಸುವುದರಿಂದ ಹಿಮ್ಮಾಹಿತಿ ಹೆಚ್ಚು ಪರಿಣಾಮಕಾರಿಯಾಗುತ್ತದೆ.

**ಧನಾತ್ಮಕ ಭಾಷೆ ಮತ್ತು ಹೊಗಳುವುದನ್ನು ಬಳಸುವುದು**

ನಮ್ಮನ್ನು ದೂಷಿಸುವ ಅಥವಾ ತಪ್ಪನ್ನು ತಿದ್ದುವುದರ ಬದಲು ಯಾರಾದರೂ ನಮ್ಮನ್ನು ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡಿದರೆ ನಮ್ಮ ಅನುಭವ ಹಿತಕರವಾಗಿರುತ್ತದೆ. ಧನಾತ್ಮಕ ಭಾಷೆ ಬಳಸಿ ಇಡೀ ತರಗತಿಯನ್ನು ಅಥವಾ ಯಾವುದೇ ವಯೋಮಾನದ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಸಾಧ್ಯ. ಆದರೆ ಹೊಗಳುವಿಕೆ ನಿರ್ದಿಷ್ಟವಾಗಿ ವಿದ್ಯಾರ್ಥಿ ನಿರ್ವಹಿಸಿದ ಕೆಲಸದ ಬಗ್ಗೆ ಇರಬೇಕೇ ಹೊರತು ವಿದ್ಯಾರ್ಥಿಯ ಬಗ್ಗೆ ಅಲ್ಲ. ಇಲ್ಲದಿದ್ದರೆ ಇದು ವಿದ್ಯಾರ್ಥಿಯ ಪ್ರಗತಿಗೆ ನೆರವಾಗುವುದಿಲ್ಲ. 'ಚೆನ್ನಾಗಿ ಮಾಡಿದೆ" ಎಂದು ಹೇಳಿದರೆ ಅದು ನಿರ್ದಿಷ್ಟ ಹಿಮ್ಮಾಹಿತಿಯಾಗುವುದಿಲ್ಲ. ಹಾಗಾಗಿ ಕೆಳಗಿನ ಯಾವುದಾದರೂ ಒಂದನ್ನು ಹೇಳುವುದು ಒಳ್ಳೆಯದು:




**ಸರಿಪಡಿಸುವುದು ಹಾಗೂ ಸುಳಿವು ನೀಡುವುದನ್ನು ಬಳಸುವುದು**

ನೀವು ನಿಮ್ಮ ವಿದ್ಯಾರ್ಥಿಗಳೊಂದಿಗೆ ನಡೆಸುವ ಮಾತುಕತೆ ಅವರ ಕಲಿಕೆಗೆ ನೆರವಾಗುತ್ತದೆ. ಅವರು ನೀಡಿದ ಉತ್ತರ ತಪ್ಪೆಂದು ಹೇಳಿ, ಆ ಸಂಭಾಷಣೆಯನ್ನು ಅಲ್ಲಿಗೇ ಮುಗಿಸಿದರೆ, ಅವರು ಇನ್ನೂ ಪ್ರಯತ್ನಿಸುವುದಕ್ಕೆ ಹಾಗೂ ಆಲೋಚಿಸುವುದಕ್ಕೆ ಅವಕಾಶವನ್ನು ನಿರಾಕರಿಸಿದಂತೆ ಆಗುತ್ತದೆ. ನೀವು ನಿಮ್ಮ ವಿದ್ಯಾರ್ಥಿಗಳಿಗೆ ಒಂದು ಸುಳಿವನ್ನು ನೀಡಿದರೆ ಅಥವಾ ಮುಂದುವರಿಕೆ ಪ್ರಶ್ನೆಯನ್ನು ಕೇಳಿದರೆ ಅವರು ಇನ್ನೂ ಆಳವಾಗಿ ಆಲೋಚಿಸಲು ಮತ್ತು ಉತ್ತರಗಳನ್ನು ಹುಡುಕಲು ಪ್ರೇರಣೆ ಸಿಗುತ್ತದೆ. ಅವರ ಸ್ವಂತ ಕಲಿಕೆಗೆ ಅವರೇ ಜವಾಬ್ದಾರರಾಗುವಂತೆ ಮಾಡುತ್ತದೆ. ಉದಾಹರಣೆಗೆ, ನೀವು ಅವರಿಂದ ಇನ್ನೂ ಉತ್ತಮ ಉತ್ತರ ಬರುವಂತೆ ಪ್ರೇರೇಪಿಸಲು ಅಥವಾ ಯಾವುದಾದರೂ ಒಂದು ಸಮಸ್ಯೆಯನ್ನು ಬೇರೆ ದೃಷ್ಟಿಕೋನದಿಂದ ನೋಡಲು ಕೆಳಗೆ ಕೊಟ್ಟಿರುವಂತೆ ಹೇಳುವುದರ ಮೂಲಕ ಪ್ರೇರೇಪಿಸಬಹುದು:

ಪ್ರಾರಂಭಿಕ ಓದುವಿಕೆ




ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಸಹಾಯ ಮಾಡುವಂತೆ ಪ್ರೇರೇಪಿಸುವುದು ಸೂಕ್ತವೆನಿಸುತ್ತದೆ. ಇದನ್ನು ನೀವು, ಪ್ರಶ್ನೆ ಕೇಳುವಾಗಲೇ ಕೆಳಗಿನ ಹೇಳಿಕೆಗಳನ್ನು ಬಳಸಿ ಕೇಳಬಹುದು.




ಕಾಗುಣಿತ(spelling) ಅಥವಾ ಸಂಖ್ಯೆಗಳ ಅಭ್ಯಾಸ ಮಾಡುವಾಗ ವಿದ್ಯಾರ್ಥಿಗಳನ್ನು 'ಹೌದು' , 'ಇಲ್ಲ' ಎಂದು ಹೇಳಿ ಸರಿಪಡಿಸಬಹುದು. ಇಲ್ಲಿಯೂ ಸಹ ನೀವು ವಿದ್ಯಾರ್ಥಿಗಳ ಉತ್ತರಗಳಲ್ಲಿ ಮೂಡುವ ನಮೂನೆಗಳನ್ನು ಗುರುತಿಸಲು ಹೇಳಬಹುದು, ಒಂದೇ ರೀತಿಯ ಉತ್ತರಗಳ ನಡುವಿನ ಸಂಬಂಧ ಅರಿಯಲು ಪ್ರಚೋದಿಸಬಹುದು ಅಥವಾ ಯಾವುದೋ ಒಂದು ಉತ್ತರ ಏಕೆ ತಪ್ಪು ಎನ್ನುವ ಚರ್ಚೆಗೆ ಆಸ್ಪದ ಮಾಡಿಕೊಡಬಹುದು.

ತಾವೇ ಸ್ವತಃ ತಮ್ಮ ಉತ್ತರಗಳನ್ನು ತಿದ್ದಿಕೊಳ್ಳುವುದು ಮತ್ತು ಸಹಪಾಠಿಗಳಿಂದ ತಿದ್ದಿಸುವುದು ಬಹಳ ಪರಿಣಾಮಕಾರಿ. ನಿಮ್ಮ ವಿದ್ಯಾರ್ಥಿಗಳು ಜೋಡಿಗಳಾಗಿ ನಿಯೋಜಿತ ಅಥವಾ ಇತರೆ ಕಾರ್ಯಗಳನ್ನು ಮಾಡುವಾಗ, ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳಲು ಮತ್ತು ಒಬ್ಬರ ಕಾರ್ಯವನ್ನು ಇನ್ನೊಬ್ಬರು ಪರೀಕ್ಷಿಸಲು ಪ್ರೇರಣೆ ನೀಡಬಹುದು. ಹೆಚ್ಚು ಗೊಂದಲಗಳಿಗೆ ಅವಕಾಶವಿಲ್ಲದಿರುವಂತೆ, ಒಂದು ಸಲಕ್ಕೆ ಒಂದು ಅಂಶವನ್ನು (aspect) ಕೇಂದ್ರಿಕರಿಸಿ, ತಿದ್ದುಪಡಿ ಮಾಡಿಕೊಳ್ಳುವುದು/ಮಾಡುವುದು ಒಳ್ಳೆಯದು,

## ʼಚ್ಚುವರಿ ಸಂಪನ್ಮೂಲಗಳು

- *Annual Status of Education Report 2012*, published by ASER Centre: http://www.asercentre.org/education/India/status/p/143.html
- Room to Read, India: http://www.roomtoread.org/Page.aspx?pid=304
- A useful site for explaining what reading involves: http://www.readingrockets.org/article/352
- Traditional Indian stories: http://www.indiaparenting.com/stories/index.shtml#77
- Knowledge, behaviours and activities for early readers: http://www.siue.edu/education/readready/1_Literacy/1_SubPages/1_ld_emergent.htm
- Resources to improve students' reading and writing in school: http://fdf.readingrecovery.org/resources
- Phonemic awareness activities: http://teams.lacoe.edu/documentation/classrooms/patti/k-1/activities/phonemic.html

## ಪರಾಮರ್ಶನ/ಗ್ರಂಥಸೂಚಿ

Clay, M.M. (2005) *Literacy Lessons Designed for Individuals.* Portsmouth, NH: Heinemann.

Graham, J. and Kelly, A. (2000) *Reading under Control: Teaching Reading in the Primary School*, 2nd edn. London: David Fulton Publishers, in association with the University of Surrey.

IT Tragedy (undated) 'Independence Day poem kids Hindi English short long [sic]' (online). Available from: http://www.ittragedy.com/independence-day-poem-kids-hindi-english-short-long/ (accessed 23 October 2014).

Jhingran, D. (2005) *Language Disadvantage: The Learning Challenge in Primary Education*. New Delhi: APH Publishers.

## Acknowledgements

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.